॥धर्मो रक्षति रक्षितः॥

# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. 32 No. 1 NOVEMBER 2022 Pages 16 Rs. 2/-




PAGE DONATED BY : PROFESSIONAL COURIERS WESTERN & CENTRAL REGION, COURTESY : SHRI RAMESH G. HEGDE, MADAPPAN, KARKI, DADAR T. T.

# Felicitation to Elderly & Achievers



PAGE DONATED BY : **SHRI SADANANDA HEGDEKATTE MOODABIDIRE & FAMILY IN THE MEMORY OF HIS FATHER LATE V. V. HEGDEKATTE**

"**Havyaka Sandesha**" is a monthly publication by **HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆ 2665 2591

| | | |
|---|---|---|
| ***Hon. Editor*** | : | Smt. Amita S. Bhagwat |
| ***Editorial Committee*** | | Smt. Shashikala Hegde<br>Smt. Tanuja Hegde<br>Shri Umesh Hegde<br>Shri Ganesh Bhat<br>Smt. Shailaja Hegde |
| ***Publisher*** | : | Narayan Akadas R.<br>Hon. Gen. Secretary |
| ***Printed at*** | : | M/s. Navin Printers<br>Mumbai - 400 016.<br>✆ 2430 8316 |

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2022-2023**

| | | |
|---|---|---|
| ***President*** | : | Shivkumar P. Bhagwat |
| ***Vice - President*** | : | Sanjay Bhat |
| ***Hon. Gen. Secretary*** | : | Narayan Akadas |
| ***Hon. Jt. Secretary*** | : | Vasant Bhat |
| ***Hon. Treasurer*** | : | Gautam Upadhya |

***Elected Members :***

| | |
|---|---|
| Smt. Tanuja Hegde | G. S. Bhat |
| Smt. Shashikala Hegde | Vishnu Bhagwat |
| Ramana Bhat | Ramesh Vaidya |
| Umesh Hegde | Chidanand Bhagwat |
| Anant Bhat | |

***Co-opted Members :***
Chandrashekhar Joshi, G. V. Hegde

***ಸಂಪಾದಕೀಯ*** (ಹವಿಗನ್ನಡ)

# ಶಿಂಡ್ಲೈಕಾಯಿಗೆ ಎಣ್ಣೆ ಹಚ್ಚಿ



'ಮೊಗೆಕಾಯ್'ಗೆ ಕಾಡಿಗೆ ಹಚ್ಚಿ, ಕಣ್ಣು ಮೂಗು ಬರ್ದು ಅದನ್ನ ರಾಕ್ಷಸನ ಮಾಡಿಬಿಡ್ತಾ. ಮತ್ತೆ ಅವಂಗೇ ಪೂಜೆ ಮಾಡತ್ರಾ? ಹಿಂಗೆ ಎಂತಕ್ಕೆ ಮಾಡ್ತ್ರೀ?" ನಂಗೊ ಸಣ್ಣಕ್ಕಿರಕಾದ್ರೆ ದೀಪಾವಳಿಯ ಸಂಭ್ರಮದ ಮಧ್ಯದಲ್ಲೂ, ಹಿಂಗಿದ್ದು ನೂರೆಂಟು ಪ್ರಶ್ನೆ ಮನಸ್ನಲ್ಲಿ ಏಳತಿತ್ತು.

"ಅಂವಾ ರಾಕ್ಷಸಾದ್ರೂ ಒಳ್ಳೆಯವಾ ಆಗಿದ್ದ. ಅವನ ಕಾಲದಲ್ಲಿ ಎಲ್ಲರೂ ಆರಾಮಾಗಿ, ಸಂತೋಷವಾಗಿ ಇದ್ದಿದ್ವಡಾ. ಅದಕೆಯಾ ಯಾರಿಗೂ 'ಬಲಿಯಂದ್ರ'ನ ಹೆಸ್ರು ಹೇಳಿ ಹೆದರಿಸ್ವಿಲ್ಲೆ. ವರ್ಷದಲ್ಲಿ ಒಂದ್ ಸತಿಗಾದ್ರೂ ಅವನ್ನ ಮನೆಗೆ ತಂದು ಕೂರ್ಸಿ, ಅವನ ಪೂಜೆ ಮಾಡಿ ನಂಗೋನೂ ಖುಷಿ ಬಿಟ್ಕತ್ತೊ." ಹಿರೀರು ಹೇಳ್ತಿದ್ದೊ. ಹೌದು, ಅಂವಾ ಬಂದಾಗ ಪಟಾಕಿ ಸರಮಾಲೆ, ಎಲ್ಲೆಲ್ಲೂ ದೀಪಾ, ಬೆಳಕು.

ಬಲಿಯಂದ್ರ ಒಳ್ಳೆವ್ನೇ ಇದ್ದಿಕ್ಕು. ಆದ್ರೆ ಅತಿ ಆಸೆ ಮಾಡಿ, ಇಂದ್ರನ ಪಟ್ಟಕ್ಕೆ ಕಣ್ಣ ಹಾಕದ್ನಡಾ. ಇಂದ್ರನ ಕಾಪಾಡುಲೆ ಶ್ರೀ ವಿಷ್ಣುಗೆ ವಾಮನನ ಅವತಾರ ಹಾಯ್ಕಂಡಿ ಬರಕಾತಡಾ. ಅದ್‌ಕೇ ಅವಂಗೆ ಕೆಡುಗಾಲ ಬಂತು.

ಹೌದು. ನಂಗೊ ಸಣ್ಣಕಿರಕಾದ್ರೆ ಬೇಜಾರಾಗ್ತಿತ್ತು. ಪಾಪಾ ಬಲಿಯೇಂದ್ರ ಪಾತಾಳಕ್ಕೆ ಹೋಗಿಬಿಟ್ಟ. ಆದರೂ ರಾಕ್ಷಸನ ನಿರ್ನಾಮ ಆತು ಅಂತ ಖುಷಿ. ಅದಕ್ಕೆ ನಂಗೋನೂ ಶಿಂಡ್ಲೈಕಾಯಿಗೆ ಎಣ್ಣೆ ಹಚ್ಚಿ ಅದನ್ನ ಕಾಲಿಂದ ಒದೆತಿದ್ದೊ. ರಾಕ್ಷಸನ ಮೆಟ್ಟ್‌ದೋ ಅಂದಕತ್ತಿದ್ದೊ. "ನಿಂಗ್ಳಲಿದ್ದ ದುಷ್ಟತನಾ ಮೆಟ್ಟ್‌ದ್ರಿ" ಅಂತ ದೊಡ್ಡವರು ಹೇಳ್ತಿದ್ದೊ. ಅದು ಹೌದು. ನಂಗೊ ಯಾರೂ ಪರಿಪೂರ್ಣರು ಅಲ್ದಲಿ. ಪರಿಪೂರ್ಣರಾಗಿದಿದ್ರೆ ಮನುಷ್ಯರು ಆಗಿರ್ತಿದ್ವಿಲ್ಲೆ. ಆದರೆ ಕೆಟ್ಟ ಬುದ್ದಿ ರಾಶಿ ಅಪ್ಪುಲೆ ಬಿಟ್ರೆ ನಂಗೊ ರಾಕ್ಷಸರಾಗಿಬಿಡ್ತೊ.

'ಬಲಿ' ರಾಕ್ಷಸ ಆದ್ರೂ ಕೆಟ್ಟ ಬುದ್ಧಿಗೆ ಅವಕಾಶಾ ಮಾಡ್‌ಕೊಡಗಿದ್ರೆ ಅವಂಗೆ ಆ ಗತಿ ಬತ್ತಿತ್ತಿಲ್ಲೆ. ಪಾತಾಳಕ್ಕೆ ಹೊಗ್ತಿದ್ನಿಲ್ಲೆ.

ಆದ್ರೂ ನಮ್ಮ ಸಂಸ್ಕೃತಿ ಹ್ಯಾಂಗಿದ್ದು ಅಂದ್ರೆ ನಂಗೋ ಒಳ್ಳೆಯತನ ಯಾವಾಗ್ಲೂ ಮರೆತ್ವಿಲ್ಲೆ. ಬಲಿಯಂದ್ರನ ನೆನಪಿಗೆ ಸಿಹಿ ಕಡುಬು. ಬೆಳಿಗ್ಗೆ ಎಣ್ಣೆ ಹನಿಸ್ಕಂಡಿ, ಅವಲಕ್ಕಿ, ಕಾಯ್ತಂಬಳಿ, ಮೊಸರು ತಿಂದಕಂಡಿ ಹಂಡೆ ತುಂಬ ಇದ್ದ ಬಿಸಿ ನೀರಿನಲ್ಲಿ ಮಿಂದಕಂಬುದು... ಇದೆಲ್ಲ ಮಾಡ್ತೊ.

ಎಂತದೇ ಹೇಳಿ. ಎಲ್ಲಕ್ಕಿಂತ ಹೆಚ್ಚು ಖುಷಿ ಅಂದರೆ ದೀಪಾವಳಿಯ ಗೋಪೂಜೆ. ನಂಗ್ಳಿಗೆ ಗೋವು ಅಂದರೆ ತಾಯಿ ಹಾಂಗೆ. ಗೋವಿನಲ್ಲಿ ಎಲ್ಲಾ ದೇವರನ್ನು ಕಾಣು ನಂಗೋ ಆ ದಿವಸ ಅದಕೆ ಶೃಂಗಾರ ಮಾಡ್ತೊ. ಮನೆ ತುಂಬಾ ಶೇಡಿಲಿ ಗೋವಿನ ಕಾಲು ಬರೆತೊ. ಗೋವಿಗೆ ಶೃಂಗಾರ ಮಾಡದ್ರೆ ಅದು ಎಷ್ಟು ಚಂದಕ್ಕೆ ಕಾಣತು.!

ದೀಪಾವಳಿ ಬಂತು ಅಂದ ಕೂಡಲೆ ಊರಿನ ನೆನಪು. ಹಾಂಗೆ ಹೇಳ್ಕಂಡಿ ನಂಗೊ ಮುಂಬಯಿಯಲ್ಲಿ ಸುಮ್ಮಂಗ್ ಕುತ್ಕತ್ವಿಲ್ಲೆ. ಮನೆಗೆ ತಾಗಿ ಇದ್ದ ಬಾಲ್ಕನಿಲಿ ಅಥವಾ ಕಿಡಕಿಲಿ ದೀಪದ ಬುಟ್ಟಿ ತೂಗಿ ಬಿಡ್ತೊ. ಸಣ್ಣ ಸಣ್ಣ ಬಲ್ಬು ಇದ್ದ ದೀಪದ ಮಾಲೆ ಹಚ್ಚ್‌ತೊ. ಅದರಲ್ಲಿ ಎಲ್ಲಾ ಬಣ್ಣದ ಕಲರವ. ನಂಗ್ಳ ಎಲ್ಲಾ ನೆಂಟರಿಷ್ಟರನ್ನ, ಗೆಳೆಯ-ಗೆಳತಿಯರನ್ನ ಭೆಟ್ಟಿಯಾಗ್ತೋ. ಆ ಮೂರು ದಿವ್ಸದಲ್ಲಿ ಇಡೀ ವರ್ಷಕ್ಕೆ ಬೇಕಾದಷ್ಟು ಹುರುಪು ಬತ್ತು.

ನಂಗುತಿದ್ದು ಈ ಪತ್ರಿಕೆ ಮುಟ್ಟಕಾದ್ರೆ ದೀಪಾವಳಿ ಮುಗ್ದಿ ನಿಂಗೊ ಎಲ್ಲಾ ಹೆಚ್ಚು ಖುಷಿಯಾಗಿರ್ತ್ರಿ.

**ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು.**

ಅಮಿತಾ ಎಸ್ ಭಾಗವತ್

e-mail : amitabhagwat@gmail.com

*PAGE DONATED BY : **HEGDE HOSPITAL, CHEMBUR,** COURTESY : **DR. DINESH HEGDE***

# ಕಾಳಿದಾಸನನ್ನು ಕನ್ನಡಕ್ಕಿಳಿಸಿದ ಕನ್ನಡ ಕಣ್ಮಣಿಗಳು

✍ ಶೈಲಜಾ ಹೆಗಡೆ, ಮುಂಬಯಿ

*(ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ)*

**ಮೇಘಸಂದೇಶ : ಪಿ. ಬಸವಣ್ಣ :**

ಮೂಲ ಕಾವ್ಯದಲ್ಲಿರುವಂತೆಯೇ, ಇವರ ಅನುವಾದ ಕಾವ್ಯವೂ ಪೂರ್ವ ಮೇಘ ಮತ್ತು ಉತ್ತರ ಮೇಘವೆಂದು ವಿಭಾಗಗೊಂಡಿದೆ. ಪಪಿ. ಬಸವಣ್ಣನವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊಳ್ಳೆಗಾಲದಲ್ಲಿ ಮುಗಿಸಿದರು. ಉನ್ನತ ಶಿಕ್ಷಣಕ್ಕಾಗಿ ಇವರು ಮದ್ರಾಸಿಗೆ ತೆರಳಿದರು. ಜೀವನೋಪಾಯಕ್ಕೆ ವಕೀಲಿ ವೃತ್ತಿಯನ್ನು ಆಶ್ರಯಿಸಿದರು. ಇವರು ನೇರ ಮತ್ತು ನ್ಯಾಯ ನಿಷ್ಠುರ ನುಡಿಗೆ ಹೆಸರಾದವರು. ವಕೀಲಿ ವೃತ್ತಿಯಲ್ಲಿದ್ದುಕೊಂಡೇ ಸಾಹಿತ್ಯ ಕೃಷಿಯನ್ನು ನಡೆಸಿಕೊಂಡು ಬಂದವರು. ಇವರು ತಮ್ಮ ಮೇಘಸಂದೇಶ ಕಾವ್ಯದ ಪೀಠಿಕಾ ಪ್ರಕರಣದಲ್ಲಿ ಹೆತ್ತ ತಂದೆ ತಾಯಿಯರನ್ನು ವಂದಿಸಿ, ಕೃತಕೃತ್ಯತೆಯನ್ನು ಪಡೆದಿದ್ದಾರೆ.

ಕರುನಾಡ ರಾಜ್ಯದೊಳು ಮೈಸೂರು ಜಿಲ್ಲೆಯಲಿ
ಮೆರೆವ ಕೊಳ್ಳೇಗಾಲ ತಾಲ್ಲೂಕಿನೊಳಗಿರ್ಪ
ಕರಮೆಸೆವ ಮುಳ್ಳೂರು ಹಳ್ಳಿಯೊಳು ಲಿಂಗಪ್ಪ ಮಾದಮ್ಮ ದಂಪತಿಗಳ
ಸಿರಿಗಬ್ಬದೊಳಗುದಿಸಿ ಪುಟ್ಟುಮಲ್ಲಮ್ಮನಂ
ವರಿಸಿ ಸಂಸಾರಿಯಾಗಿರ್ದೊಡಂ ನಡೆಯಲ್ಲಿ
ವರಯೋಗಿಯೋಲ್ಬಾಳ್ದ ಪರುವಪ್ಪ ನೀವೆಲ್ಲ ಹರಸಿ ಸಲಹಯ್ಯ ತಂದೆ

ಪಿ. ಬಸವಣ್ಣನವರ ಕಾವ್ಯದಲ್ಲಿ ಪೇಳ್ವ, ಪೊಳೆವ, ಪೋಗು, ಪೀರ್ದು ಮೊದಲಾದ ಹಳಗನ್ನಡ ಶಬ್ದಗಳು ಮತ್ತು ಮರಮರಳಿ, ಬಗೆಬಗೆಯ, ಝುಗಝುಗಿಪ, ಥಳಥಳಿಪ ಮುಂತಾದ ಛೇಕಾಲಂಕಾರ ಪದಗಳು ಪುನಃ ಪುನಃ ಬಳಕೆಯಾಗಿವೆ. ಅಲಕಾನಗರಿಯ ರಮಣೀಯತೆಯನ್ನು ವರ್ಣಿಸುವ ಪದ್ಯವನ್ನು ಗಮನಿಸಬಹುದು.

ಲಲಿತವನಿತೆಯರಿಂದ ರಮ್ಯಚಿತ್ರಗಳಿಂದ
ವುಲಿಯುತಿಹ ಸಂಗೀತಭೇರಿನಾದಗಳಿಂದ
ತೊಳಪ ಮಣಿನೆಲವಾಂತು ಗಗನಮಂ ಚುಂಬಿಸುವ ಭವ್ಯತೆಯ
ಭವನಂಗಳು ।
ಥಳಥಳಿಪ ಮಿಂಚುಳ್ಳ ಪೊಳೆವ ಮಳೆಬಿಲ್ಲುಳ್ಳ
ಸೆಳೆವ ಗಂಭೀರ ಘೋಷಣೆಯುಳ್ಳ ನೀರೊಡಲ
ಪೊಳಪುಳ್ಳ ತುಂಗನಹ ನಿನ್ನನಾಯಾಯ ಸುವಿಶೇಷದಿಂ
ಸರಿಪೋಲ್ವುವೈ ॥

ಎಂದು ಮೂಲಕಾವ್ಯದ ವಿದ್ಯುತ್ವಂತಂ ಲಲಿತವನಿತಾ ಶೇಷೈಃ ಎಂದು ಅಲಕಾ ಪಟ್ಟಣದ, ಭವ್ಯ ಸೌಧಗಳನ್ನು ಮೇಘದೊಡನೆ ಹೋಲಿಸಿ, ಲಲನೆಯರನ್ನು ಮಿಂಚಿಗೆ ಹೋಲಿಸಿ ಅಲ್ಲಿಯ ರಮಣೀಯತೆಯನ್ನು ಲಾಲಿತ್ಯಪೂರ್ಣವಾಗಿ ವರ್ಣಿಸಲಾಗಿದೆ. ಅಂತೆಯೇ, ಪಿ.ಬಸವಣ್ಣನವರ ಅನುವಾದ ಕಾವ್ಯದಲ್ಲಿ ರಸ, ಅಲಂಕಾರ, ಉಪಮೆ, ಅರ್ಥಾಂತರನ್ಯಾಸಗಳು ಮೂಲಕಾವ್ಯವನ್ನು ಅನುಸರಿಸಿದ ರೀತಿಯನ್ನು ಗಮನಿಸಬಹುದು.



ಮೂಲ : ತಸ್ಯಾಃ ಪಾತುಂ
ಸಂಗಮೇವಾಭಿರಾಮಾ ॥
ಅನುವಾದ : ಪಳುಕು
ಹೊಳಪಂತೆಸೆಯುವಮರ ನದಿಜಲವೀಂಟೆ
ಕೆಳಗಿಳಿದ ದೇವ ಸಾಮಜದವೋಲ್ನೀಂ ಬಾಗೆ
ಥಳಥಳಿಪ ನಿನ್ನ ಹಿಮ್ಮೆಯರೆಯೊಡಲು
ನಭದಿ ನೇತಾಡುತಿರೆ ತರ್ಕಿಸಲ್ ।
ಜಲದೊಳಾಕ್ಷಣ ನಿನ್ನ ಪಡಿನೆಳಲು ಪಸರಿಸಲು
ತಳವಲ್ಲದಾ ತಳದಿ ಕರಿಜಗುನೆಯಂ ಕೂಡಿ
ಲಿಯುವೋಲಾಗಂಗೆ ಬಹುರಮ್ಯತೆಯ ತಾಳಿ
ಕಂಗೊಳಿಪುದೆಂದೂಹಿಪೇಂ

ಕಾಳಿದಾಸನ ಮೇಘದೂತ ಕಾವ್ಯದ ಉತ್ಪ್ರೇಕ್ಷಾಲಂಕಾರದ ಅರ್ಥಪ್ರತಿಪಾದನೆಯು ಮೇಲಿನ ಪದ್ಯಗಳಲ್ಲಿ ಸೊಗಸಾಗಿ ಮೂಡಿಬಂದಿದೆ. ಅದೇ ರೀತಿ,

ರಿಕ್ತಃ ಸರ್ವೋ ಭವತಿ ಹಿ ಲಘುಃ ಪೂರ್ಣತಾ ಗೌರವಾಯ
ಗೌರವಕೆ ಪೂರ್ಣತೆಯೆ ಕಾರಣಂ ಬರಿದಾಗಲೆಲ್ಲಮುಂ ಹಗುರವೈಸೆ
ಪ್ರತ್ಯುಕ್ತಂ ಹಿ ಪ್ರಣಯಿಷು ಸತಾಮೀಪ್ಸಿತಾರ್ಥಕ್ರಿಯೈವ
ಘನಮಹಿಮರುತ್ತರವು ಪ್ರಣಯಿಗಳಿಗಿಷ್ಟಾರ್ಥಮಂ ಸಲಿಪ
ಕಾರ್ಯಮಲ್ತೆ

ಮುಂತಾದ ಅರ್ಥಾಂತರನ್ಯಾಸಗಳು ಮೂಲಕೃತಿಯನ್ನು ಯಥಾರ್ಥವಾಗಿ ಅನುಸರಿಸಿವೆ. ಉಪಮೆಗಳ ಅನುಸರಣದಲ್ಲಿಯೂ ಪಿ.ಬಸವಣ್ಣನವರ ಅನುವಾದ ಕಾವ್ಯವು ಯಶಸ್ಸನ್ನು ಗಳಿಸಿದೆ.

ಬರ್ಹೇಣೇವ ಸ್ಫುರಿತರುಚಿನಾ ಗೋಪವೇಷಸ್ಯ ವಿಷ್ಣೋಃ
ಚೆನ್ನವಿಲ ಗರಿಯಾಂತ ಗೋಪವೇಷದ ವಿಷ್ಣು ತನುಕಾಂತಿಗಿಂತಧಿಕವೈ
ಭತುಃ ಕಂಠಚ್ಛವಿರಿತಿ ಗಣೈಸ್ಸಾದರಂ ವೀಕ್ಷ್ಯಮಾಣಃ
ಆದಿಯೊಡೆಯನ ಕೊರಳ ಕಪ್ಪಿನಂತಿಹನೆಂದು ಸಾದರದಿ ನಿನ್ನ
ಪ್ರಮಥಗಣ ನೋಡುತಿರೆ

ಮೊದಲಾದ ಉಪಮೆಗಳನ್ನು ಉದಾಹರಿಸಬಹುದು. ಅಚ್ಚ ಹಳಗನ್ನಡ ಶೈಲಿಯಲ್ಲಿ ನಿರೂಪಿತವಾಗಿರುವುದು ಇವರ ಅನುವಾದ ಕಾವ್ಯದ ವೈಶಿಷ್ಟ್ಯವಾಗಿದೆ.

ಹೀಗೆ ಪ್ರತಿಭಾವಂತ ಶ್ರೇಷ್ಠ ಕವಿಯಾದ ಪಿ.ಬಸವಣ್ಣನವರು, ಈಗ ಕುಮಾರ ನಿಜಗುಣ ಶಿವಯೋಗಿಯಾಗಿ ಪರಿವರ್ತನೆಯಾಗಿರುವುದು ಒಂದು ಅದ್ಭುತ ಪವಾಡವೇ ಸರಿ. ಅವರ ಆಧ್ಯಾತ್ಮ ಸಿದ್ಧಿಯೂ ಹಿರಿದಾದದ್ದು. ಸಾಹಿತ್ಯ ಕೃಷಿಯೂ ಅಗಣಿತವಾದದ್ದು. ಪಿ. ಬಸವಣ್ಣನವರು ಜನಿಸಿದ್ದು ಇಂದಿನ ತಮಿಳುನಾಡಿನ ಅಂದರೆ, ಮದರಾಸು ಪ್ರಾಂತದ ಮುಳ್ಳೂರು ಗ್ರಾಮದಲ್ಲಿ. (1933) ಶಿವಭಕ್ತ ಸಂಪನ್ನರಾದ ತಂದೆ ಪರುವಪ್ಪ ಮತ್ತು

*PAGE DONATED BY : **SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR***

ತಾಯಿ ಪುಟ್ಟ ಮಲ್ಲಮ್ಮ. ಬೆಳೆಯ ಸಿರಿ ಮೊಳಕೆಯಲ್ಲಿ ನೋಡು ಎಂಬಂತೆ, ಎಳವೆಯಲ್ಲಿ ದೊರೆತ ಉತ್ತಮ ಸಂಸ್ಕಾರ ಇವರನ್ನು ಸಾರ್ಥಕ ಬದುಕಿನೆಡೆ ಸಾಗುವಂತೆ ಮಾಡಿತು. 1981ರಲ್ಲಿ ಪತ್ನಿ ವಿಯೋಗದಿಂದ ಖಿನ್ನರಾದ ಇವರು ಸನ್ಯಾಸ ದೀಕ್ಷೆಯನ್ನು ಪಡೆದು, ಕುಮಾರ ನಿಜಗುಣರೆಂಬ ಅಭಿಧಾನದಿಂದ ಪ್ರಸಿದ್ಧರಾದರು. ಸನ್ಯಾಸಯೋಗ ಇವರ ಸಾಹಿತ್ಯ ಸೃಷ್ಟಿಗೆ ಇನ್ನಷ್ಟು ಪುಷ್ಟಿಯನ್ನು ನೀಡಿತು. ಕವಿಪ್ರಪಂಚದಿಂದ ಕಣ್ಮರೆಯಾಗುತ್ತಿರುವ ಛಂದಸ್ಸಿನ ಸಂಶೋಧನೆ ಹಾಗೂ ವೃತ್ತರಚನೆ, ಹೊಸ ಹೊಸ ಕೃತಿಗಳ ರಚನೆಯಲ್ಲಿ ಬಲವಾಗಿ ತೊಡಗಿಸಿಕೊಂಡರು. ಸುಮಾರು 130ಕ್ಕೂ ಹೆಚ್ಚು ಷಟ್ಪದಿ ಪ್ರಕಾರಗಳನ್ನೂ, 1000ಕ್ಕೂ ಮಿಕ್ಕಿದ ಹೊಸ ವೃತ್ತಗಳನ್ನೂ ಅವಲಂಭಿಸಿ ಕಾವ್ಯರಚನೆ ಮಾಡಿದ್ದಾರೆ. ಇವರ ಛಂದೋವಿಲಾಸ ವೈಭವ ಕನ್ನಡ ಕಾವ್ಯ ಪ್ರಪಂಚದಲ್ಲಿ ಮೆರೆದ ಅಮರಕೃತಿ. ಇದಲ್ಲದೆ, ನಿಜಗುಣೀಯ ಪೀಠಿಕಾ ಪ್ರಕರಣ, ವೃತ್ತವಿಲಾಸ ವೈಭವ, ಶಿವನ ಪಂಚವಿಂಶತಿ ಲೀಲೆಗಳು, ಸಂಗಮೇಶ್ವರ ಶತಕ, ಶ್ರೀ ಶಿವಕುಮಾರ ಚರಿತಂ, ಗಣಾಕ್ಷರವೃತ್ತಶತಕ, ಪಾರ್ವತೀಪ್ರಣಯ ಕಲಹಂ (ಅನುವಾದ), ಭಿಕ್ಷ, ಬೋಳು ಬಸವನ ಬೊಂತೆ ಇವೇ ಮೊದಲಾದ ಅನೇಕ ಅಮೂಲ್ಯ ರಚನೆಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ಧೀಮಂತ ಚೇತನ ಇವರು. ಛಂದಪ್ರಿಯರಾದ ಇವರಿಗೆ ಪುಂಖಾನುಪುಂಖವಾಗಿ ಛಂದಸ್ಸುಗಳನ್ನು ಸೃಷ್ಟಿಸುವ ಆಶುಕವಿತ್ವ ಸಿದ್ಧಿಸಿದೆ. ಸಾಹಿತ್ಯ ವಿಶೇಷಗಳಲ್ಲೊಂದಾದ ಗುಣಿತಾಕ್ಷರಿ ರಚನೆಯಲ್ಲಿಯೂ ಇವರು ಸಿದ್ಧಹಸ್ತರು. ಲಕ್ಷ್ಮೀಶನ ಜೈಮಿನೀಭಾರತದಲ್ಲಿಯ ಕಾಗುಣಿತಾಕ್ಷರಿ ಇವರಿಗೆ ಗುಣಿತಾಕ್ಷರಿ ರಚನೆಗೆ ಪ್ರೇರಣೆ ನೀಡಿತು. ಇವರ ಮೇಘಸಂದೇಶ ಅನುವಾದ ಕೃತಿಯ ಪೀಠಿಕಾ ಪ್ರಕರಣದಿಂದ ಆಯ್ದ ಒಂದು ಪದ್ಯವನ್ನು ಉದಾಹರಿಸಬಹುದು.

ಮರಣಭವಭಯರಹಿತೆ ಮಾರಾರಿಸದ್ವನಿತೆ
ಮಿರುಪದ್ರಿ ಸಂಭೂತೆ ಮೀನಾಂಕಸುದತಿಜೀತೆ
ಮುರವೈರಿಸುರನಮಿತೆ ಮೂಲೋಕವಿಖ್ಯಾತೆ ಮೃಗಶಾಬನಯನಾಂಚಿತೆ
ಮೆರೆವ ಸದ್ಗುಣಭರಿತೆ ಮೇನಕಾಜಾತೆ ಮೈ
ಯರೆವಡೆದ ಪೂತೆ ಮೊರೆಹೊಗುವರಂ ಕಾಯ್ವ ಸ
ಚ್ಚರಿತೆ ಮೋಕ್ಷವಿದಾತೆ ಮೌನಿವಂದಿತೆ ಮಂಗಳಯುತೆ ಮಃಪ್ರೀತೆ
ಪೊರೆಗೆ

ಎಂದು ಕವಿ ಮಕಾರ ಗುಣಿತಾಕ್ಷರಿಯಲ್ಲಿ ಗಿರಿಜೆಯ ಸೊಗಸನ್ನು ಸೊಗಸಾಗಿ ಬಣ್ಣಿಸಿದ್ದಾರೆ. ಸ್ವಾಧ್ಯಾಯ ನಿರತರಾದ ಕುಮಾರ ನಿಜಗುಣರು ಜ್ಞಾನಾಭಿವೃದ್ಧಿಗಾಗಿ, ವಿದ್ವಾಂಸರ ಮನೆಗಳಿಗೆ ಭೇಟಿ ನೀಡಿ ಅವರಿಂದ ಪ್ರಭಾವಿತರಾಗಿದ್ದಾರೆ. ಅವರಲ್ಲಿ ಕುವೆಂಪು, ದ.ರಾ.ಬೇಂದ್ರೆ, ತ. ಸು. ಶ್ಯಾಮರಾಯ, ಡಿ.ವಿ.ಜಿ, ಡಾ. ಕೆ. ಕೃಷ್ಣಮೂರ್ತಿ, ವಿ.ಕೃ.ಗೋಕಾಕ್, ಪು.ತಿ.ನ, ಜ್ಯೋತಿಸ್ಸಿದ್ಧಾಂತ ಕೇಸರಿ ಆಸ್ಥಾನ ವಿದ್ವಾನ್ ವೆಂಕಟಸುಬ್ಬಾ ಶಾಸ್ತ್ರಿ ಮುಂತಾದವರು ಪ್ರಮುಖರು. ಇವರೆಲ್ಲರ ಮೆಚ್ಚುಗೆಯ ನುಡಿಗಳು ಕುಮಾರ ನಿಜಗುಣರಿಗೆ ಡಿ.ವಿ.ಜಿ ವೃತ್ತ, ಕುವೆಂಪು ವೃತ್ತ, ಕೃಷ್ಣಮೂರ್ತಿ ವೃತ್ತ ಮೊದಲಾದ ವೃತ್ತಗ್ಗಳ ರಚನೆಗೆ ಪ್ರೇರಣೆ ನೀಡಿತು. ಇವಲ್ಲದೆ, ಅಕ್ಕಮಹಾದೇವಿ ವೃತ್ತ, ರಾಮರಾಜ್ಯ ವೃತ್ತ, ಚಂಚಲಾಕ್ಷಿ ವೃತ್ತ, ಕನಕದೇಹಿ ವೃತ್ತ, ತಿರುನೀಲಕಂಠ ವೃತ್ತ ಮೊದಲಾದ ಅಚ್ಚರಿಮೂಡಿಸುವ ವೃತ್ತಗಳ ರಚನೆಯಾಯಿತು. ಶಂಭುಸಾಹಸ್ರೀ ಎಂಬ ಶಬ್ದಾಲಂಕಾರಯುಕ್ತವಾದ ಸಾವಿರ ನಾಮದಿಂದೊಡಗೂಡಿದ 63 ವಾರ್ಧಕ ಷಟ್ಪದಿಗಳನ್ನು ಇವರು ರಚಿಸಿದ್ದಾರೆ. ಏಕದಂತ ಪಂಚಕ, ಪರಮಸತ್ಯ ಪಂಚಕ, ನಾದನಾಟ್ಯ ಪಂಚಕ, ಸಿದ್ಧೇಶ್ವರ ಪಂಚಕ, ತ್ರಿಶೂಲಿ ಪಂಚಕ ಎಂಬಿತ್ಯಾದಿ ಪಂಚಕಗಳನ್ನೂ, ಚನ್ನವೀರಾಷ್ಟಕ, ಕೃಷ್ಣಮೂರ್ತ್ಯಷ್ಟಕ, ಕೇಶವ ಭಟ್ಟಾಷ್ಟಕ ಎಂಬ ಹಲವಾರು ಅಷ್ಟಕಗಳನ್ನೂ ಕುಮಾರ ನಿಜಗುಣರು ರಚಿಸಿದ್ದಾರೆ. ಕೇವಲ ಆರನೆಯ ಇಯತ್ತೆಯವರೆಗೆ ಮಾತ್ರ ಕನ್ನಡದಲ್ಲಿ ಓದಿದ ಇವರು ಇಷ್ಟು ವ್ಯಾಪಕವಾಗಿ ಬೆಳೆದದ್ದು ಸೋಜಿಗದ ಸಂಗತಿಯಾಗಿದೆ.

ಶ್ರೀಕುಮಾರ ನಿಜಗುಣರ ಶಿಷ್ಯರು ಮತ್ತು ಅಭಿಮಾನಿಗಳು 2007ರಲ್ಲಿ ಅವರ ನಿಜಗುಣಗವಿ ಪ್ರವೇಶದ ರಜತ ಮಹೋತ್ಸವ ಮತ್ತು ಕುಮಾರ ನಿಜಗುಣರ ಎಪ್ಪತ್ತೈದನೆಯ ವರ್ಷದ ಅಮೃತ ಮಹೋತ್ಸವದ ಸಂಭ್ರಮಾಚರಣೆಯ ನಿಮಿತ್ತ 816 ಪುಟಗಳ ಬೃಹತ್ ಅಭಿನಂದನಾ ಗ್ರಂಥವನ್ನು ಅವರಿಗೆ ಭಕ್ತಿ ಗೌರವಗಳಿಂದ ಅರ್ಪಿಸಿದ್ದಾರೆ. ಅದೇ ಛಂದೋನಿಜಗುಣಿ ಎಂಬ ಗ್ರಂಥವಾಗಿದೆ. ಇವರ ಮೇಘಸಂದೇಶ ಕಾವ್ಯದ ಮುನ್ನುಡಿಯಲ್ಲಿ ತ.ಸು.ಶ್ಯಾಮರಾಯರು, ಇತ್ತೀಚಿನ ದಿನಗಳಲ್ಲಿ ನಶಿಸಿ ಹೋಗುತ್ತಿರುವ ಪ್ರಾಚೀನ ಛಂದೋರೂಪದ ಕಾವ್ಯಸೃಷ್ಟಿಯನ್ನು ಅವರು ಪುನರುಜ್ಜೀವಿಸುವುದನ್ನು ಕಂಡು ನನಗಾಗಿರುವ ಮೆಚ್ಚಿಗೆ ಸಂತೋಷದ ಫಲವಾಗಿ ಅವರ ಅಪ್ಪಣೆಯಂತೆ ಈ ಮುನ್ನುಡಿ ರೂಪದ ದೃಷ್ಟಿಬಟ್ಟನ್ನು ಅವರ ಈ ಷಟ್ಪದಿ ಕಾವ್ಯಕ್ಕೆ ಇಡಹೊರಟಿದ್ದೇನೆ ಎಂದು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಎಲೆಮರೆಯ ಕಾಯಿಯಂತೆ ಯಾವುದೇ ಪ್ರಸಿದ್ಧಿಯನ್ನು ಬಯಸದೆ ಕುಮಾರ ನಿಜಗುಣರು ಮಹತ್ಸಾಧನೆಗೈದಿದ್ದಾರೆ. ಅಧ್ಯಯನಶೀಲರಿಗೆ ಪ್ರೋತ್ಸಾಹ ನೀಡಿದ್ದಾರೆ. ಕನ್ನಡ ಸಾಹಿತ್ಯದ ಕೈಂಕರ್ಯವನ್ನು ವ್ಯಾಪಕವಾಗಿ ನಡೆಸಿದ ಇವರಿಗೆ ಯಾವುದೇ ಪ್ರಶಸ್ತಿಗಳು ದೊರೆಯದಿರುವುದು ವಿಷಾದದ ಸಂಗತಿಯಾಗಿದೆ.

*(ಮುಂದುವರಿಯುವುದು)*

UIL

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

***ADVT.***

# ಮಾಸ ಮಹಾತ್ಮ್ಯೆ

✍ ಗಣಪತಿ ಭಟ್ಟ

*(ಕಳೆದ ಸಂಚಿಕೆಯಿಂದ)*

## ವರಮಹಾಲಕ್ಷ್ಮೀ ವ್ರತ :-

ಆದರೆ ಮುಂದೆ ಈ ಕ್ರಮದಲ್ಲಿ ಸುಧಾರಣೆಯಾಗಿ ವಯೋನಿರ್ಣಯವೂ, ತಂದೆಯೇ ಉಪನಯನ ಸಂಸಾರದಿಂದ ಗಾಯತ್ರೀ ಉಪದೇಶ ಮಾಡಿ ಗುರುವಿನ ಬಳಿಗೆ ಕಳಿಸುವ ಪದ್ಧತಿಯೂ ನಿರ್ಣಯಿಸಲ್ಪಟ್ಟಿತೆಂದು ಕಂಡು ಬರುತ್ತದೆ. ವಿದ್ಯಾರ್ಜನವು ಪೂರ್ಣವಾದ ಶಿಷ್ಯನಿಗೆ ಗುರುವು ಸಮಾವರ್ತನೆಗೆ ಅಪ್ಪಣೆ ಕೊಡಲು ಅವನು ಗುರುದಕ್ಷಿಣೆಯಿಂದ ಗುರುವನ್ನು ಸಮಾಧಾನ ಪಡಿಸಿ ಸಮಾವರ್ತನ ಹೊಂದುತ್ತಿದ್ದನು. ಶಿಷ್ಯನಿಗೆ ಪೂರ್ಣಜ್ಞಾನವಾಗದೆ ಗುರುದಕ್ಷಿಣೆ ಕೊಳ್ಳುತ್ತಿದ್ದಿಲ್ಲ; ಹಾಗೂ ಸಮಾವರ್ತನೆಗೆ ಅಪ್ಪಣೆ ಕೊಡುತ್ತಿದ್ದಿಲ್ಲೆಂಬದು ಉಪನಿಷತ್ತುಗಳಿಂದ ಸ್ಪಷ್ಟವಾಗುತ್ತದೆ. ಸತ್ಯಕಾಮನೆಂಬ ಋಷಿಯಲ್ಲಿ ಉಪಕೋಸಲನೆಂಬವನೂ ಇನ್ನೂ ಹಲವು ಶಿಷ್ಯರೂ ಇರುತ್ತಿದ್ದರು. ಸತ್ಯಕಾಮನು ಉಳಿದ ಶಿಷ್ಯರಿಗೆ ಸಮಾವರ್ತನಕ್ಕೆ ಅಪ್ಪಣೆ ಕೊಟ್ಟನೆಂದೂ ಉಪಕೋಸಲನಿಗೆ ಕೊಡಲಿಲ್ಲೆಂದೂ ಹೇಳಿರುತ್ತದೆ. ಶಿಷ್ಯನು ಕೊಡಲು ಸಮರ್ಥನಿದ್ದರೂ, ಅಥವಾ ಸಿದ್ಧನಿದ್ದರೂ ಗುರುವು ಅಮಿತವಾಗಿ ದಕ್ಷಿಣೆಯನ್ನು ಕೊಳ್ಳುತ್ತಿದ್ದಿಲ್ಲೆಂದು ಕಂಡು ಬರುತ್ತದೆ. ಜನಕನು ಯಾಜ್ಞವಲ್ಕ್ಯನಿಗೆ ಸಾವಿರ ಆಕಳುಗಳನ್ನು ಕೊಡ ಮಾಡಲು ಯಾಜ್ಞವಲ್ಕ್ಯನು ಹೇಳಿದ್ದೇನಂದರೆ-पिता मेऽमन्यत नाननुाशिष्य हरितेति' *ಶಿಷ್ಯನಿಗೆ ಪೂರ್ಣಜ್ಞಾನವಾಗುವ ಮೊದಲು ಆ ಶಿಷ್ಯನಿಂದ ಏನೂ ಕೊಳ್ಳಬಾರದೆಂದು ನನ್ನ ತಂದೆಯ ಅಭಿಪ್ರಾಯ.*

ಸ್ತ್ರೀಯರಿಗೆ ಉಪನಯನ ಸಂಸ್ಕಾರವೂ, ಗಾಯತ್ರೀ ಉಪದೇಶವೂ ಪ್ರಾಚೀನ ಕಾಲದಲ್ಲಿ ಅಂದರೆ ಸ್ಮೃತಿ ಕಾಲಕ್ಕಿಂತ ಮೊದಲು ಇತ್ತೆಂದು ಕಂಡು ಬರುತ್ತದೆ. 'पुरा काले तु नारीणां मौंजीबन्वनमिष्यते । अध्यापनं च वेदानां सावित्रीवचनं पथा' (ನಿರ್ಣಯ ಸಿಂಧು) ಆದರೆ ಮುಂದೆ ಸ್ಮೃತಿಕಾರರು ಕೌಟುಂಬಿಕ ತೊಂದರೆಯನ್ನು ಪರಿಹರಿಸುವುದಕ್ಕಾಗಿ ಸ್ತ್ರೀಯರನ್ನು ಗ್ರಹಿಣಿಗಳನ್ನಾಗಿ ಗೌರವಿಸಿ ಪುರುಷರ ಮಟ್ಟಿಗೆ ಈ ಸಂಸ್ಕಾರವನ್ನೂ ವೇದಾಧ್ಯಯನವನ್ನೂ ರೂಢವಾಗಿಟ್ಟರು. ಆದರೂ ಸ್ತ್ರೀಯರು ತಮ್ಮ ತಮ್ಮ ತಂದೆಗಳ ಕಡೆಯಿಂದ ಜ್ಞಾನ ಸಂಪಾದನೆ ಮಾಡುತ್ತಿದ್ದರೆಂದು ಕಂಡು ಬರುತ್ತದೆ. ಈ ಪ್ರಕಾರ ಬ್ರಹ್ಮಜ್ಞಾನಿಗಳಾದ್ದರಿಂದಲೇ ಋಷಿತುಲ್ಯರಾಗಿ ಗರ್ಗಿ, ವಾಚಕ್ನವೀ, ವಡವಾ, ಪ್ರಾತೀಥೇಯೀ, ಸುಲಭಾ, ಮೈತ್ರೇಯಿ ಇವರು ಋಷಿಪಂಜ್ತಿಯಲ್ಲಿ ನಿತ್ಯತರ್ಪಣಕ್ಕೆ ಅರ್ಹರಾದರು.

ಈ ಸಂಸ್ಕಾರ ಹೊಂದಿದವನು ಸಮಾವರ್ತನೆಯ ವರೆಗೆ 'ಬ್ರಹ್ಮಚಾರಿ' ಯೆನಿಸುವನು. ಉಪನಯನದ ಕಾಲದಲ್ಲಿ ವಟುವಿಗೆ ಆಚಾರ್ಯನು-' ब्रह्मचायसि । अपोऽशान । (शास्त्रविहितमाचमनं कुरु । मूत्रपुरीषादौ शुद्ध्यर्थमित्यर्थ :) । कर्म कुरु । (सन्ध्यौप ! सनादिक मित्यर्थ :) । दिचा मा स्वाप्सी : । आचार्याधीनो वेदमधीथ्व । सायंप्रात र्भिक्षेथा : । सायंप्रात : समिधमा घेहि । द्वादशवर्षाणि वेदग्रहणान्तं वा ब्रह्मचर्य चर ।'

ನೀನು ಬಹ್ಮಚಾರಿಯಾಗಿರುತ್ತೀ; ಮೂತ್ರ ಮಲಾದಿ ವಿಸರ್ಜನಾನಂತರ ಶುದ್ಧಿಗಾಗಿ ಶಾಸ್ತ್ರವಿಹಿತವಾದ ಆಚಮನವನ್ನು ಮಾಡು; ಸಂಧ್ಯಾ, ಅಗ್ನ್ಯು ಪಾಸನೆ ಮುಂತಾದ ಕರ್ಮಗಳನ್ನು ಮಾಡು; ಹಗಲು ನಿದ್ದೆ ಮಾಡಬೇಡ; ಆಚಾರ್ಯರ ವಶದಲ್ಲುಳಿದು ವೇದಾಧ್ಯಯನ ಮಾಡು; ಸಂಧ್ಯಾಕಾಲ ಮತ್ತು ಹಗಲು ಭಿಕ್ಷಾಟನೆ ಮಾಡು; ಹಾಗೂ ಅಗ್ನ್ಯುಪಾಸನೆಗಾಗಿ ಸಮಿಧವನ್ನು ಸಂಗ್ರಹಿಸು; 12 ವರ್ಷ ಅಥವಾ ವೇದಾಧ್ಯಯನ ಮುಗಿಯುವವರೆಗೆ ಬ್ರಹ್ಮಚರ್ಯ ವ್ರತವನ್ನು ಪಾಲಿಸು; ಇತ್ಯಾದಿ ಉಪದೇಶಿಸುವನು.



'ಸತ್ಯಂ ವದ । ಧರ್ಮಂ ಚರ ।' ಇತ್ಯಾದಿ ವೈದಿಕ ವಾಕ್ಯಗಳು - ಸತ್ಯವನ್ನೇ ನುಡಿ; ಧರ್ಮದಿಂದ ನಡೆ; ಧರ್ಮದಿಂದ ನಡೆ; ಅಧ್ಯಯನದ ವಿಷಯದಲ್ಲಿ ಎಂದೂ ತಪ್ಪಬೇಡ; ಸತ್ಯ, ಧರ್ಮ, ಹಿತಕರವಾದ ಕರ್ಮ, ಆತ್ಮೋನ್ನತಿ, ಸ್ವಾಧ್ಯಾಯ ಹಾಗೂ ಅಧ್ಯಾಪನ, ದೇವ ಪಿತೃಗಳ ಕಾರ್ಯ ಇವುಗಳಲ್ಲಿ ಸ್ವಲ್ಪವೂ ಪ್ರಮಾದ ಮಾಡಬೇಡ; ತಾಯಿ ತಂದೆ ಆಚಾರ್ಯ ಅತಿಥಿ ಇವರೇ ದೇವರೆಂದು ತಿಳಿ; ನಿರ್ದುಷ್ಟವಾದ ಕರ್ಮಗಳನ್ನೇ ಆಚರಿಸು; ಇತರ ಕರ್ಮಗಳನ್ನಾಚರಿಸಬೇಡ; ನಾವು (ಗುರುವು) ಆಚರಿಸುವ ಕರ್ಮಗಳೊಳಗಾದರೂ ತಕ್ಕದ್ದಾದವುಗಳನ್ನಷ್ಟೇ ಸ್ವೀಕರಿಸು; ಉಳಿದವುಗಳನ್ನು ಸ್ವೀಕರಿಸಬೇಡ; ಯಾರು ನಮಗಿಂತ ಶ್ರೇಷ್ಠರಾದ ಬ್ರಾಹ್ಮಣರೋ ಅವರಿಗೆ ಆಸನವಿತ್ತು ಮನ್ನಿಸು; ಶ್ರದ್ಧೆಯಿಂದ ಕೊಡು, ಅಶ್ರದ್ಧೆಯಿಂದ ಕೊಡಬೇಡ; ದ್ರವ್ಯದ ಅನುಕೂಲತೆಯಿಂದಲೂ, ಲಜ್ಜೆಯಿಂದಲೂ, ಭೀತಿಯಿಂದಲೂ, ತಿಳುವಳಿಕೆಯಿಂದಲೂ ಅವಶ್ಯವಾಗಿ ದಾನ ಮಾಡು; (ಗುರುಕುಲವಾಸವು ಮುಗಿದ ತರುವಾಯ ಸಮಾವರ್ತನೆಗೆ ಅಪ್ಪಣೆ ಪಡೆದು) ಆಚಾರ್ಯನು ಪ್ರೀತಿಸುವ ಧನ(ಗುರುದಕ್ಷಿಣ) ವನ್ನು ಆತನಿಗೆ ಸಮರ್ಪಿಸಿ ಗೃಹಸ್ಥಾಶ್ರಮವನ್ನು ಸರಿಯಾಗಿ ಪಾಲಿಸು.' ಎಂದು ಅಮೃತ ತುಲ್ಯವಾಗಿ ಉಪದೇಶಿಸುತ್ತವೆ. ಇದಲ್ಲದೆ ಕಠಿಣ ಪ್ರಸಂಗದಲ್ಲಿ ಹ್ಯಾಗೆ ನಡಕೊಳ್ಳಬೇಕು ? ಎಂಬದನ್ನೂ, ಈ ವಿಷಯದಲ್ಲಿ ಸಂದೇಹವುಂಟಾದರೆ ವಿದ್ವಾಂಸನೂ, ನಿಸ್ಪೃಹನೂ, ಸಚ್ಛೀಲನೂ, ಆಚಾರಸಂಪನ್ನನೂ ಆದವನ ಅಭಿಪ್ರಾಯ ತಕ್ಕೊಂಡು ಅದರಂತೆ ವರ್ತಿಸಬೇಕೆಂಬದನ್ನೂ ಹೇಳುತ್ತವೆ. ಇಂಥ ಅಮೂಲ್ಯ ಸದುಪದೇಶಗಳನ್ನು ನಮ್ಮ ಪೂರ್ವಜರು ಮನ್ನಿಸಿ ನಡೆದುಕೊಂಡಿದ್ದರಿಂದಲೇ ಅವರು ಲೋಕಪೂಜ್ಯರಾದರು. ಆದರೆ ಸದ್ಯದ ಉಪನಯನದಲ್ಲಿ ಈ ಉಪದೇಶ ವಾಕ್ಯಗಳು ಬರೇ ಉಚ್ಚಾರದ ಮಟ್ಟಿಗೆ ಉಳಿದು ಇವುಗಳ ಅರ್ಥವು ತಿಳಿಯದೆ ಉಪನಯನ ವಿಧಿಯು ಮಾತ್ರ ವಿಶೇಷ ಆಡಂಬರದಿಂದ ಅಂದರೆ ವಾದ್ಯ, ನೃತ್ಯ, ಗಾಯನ ಮೊದಲಾದವುಗಳ ಆಡಂಬರದಿಂದಲೂ, ಭೋಜನ ಸಮಾರಂಭದಿಂದಲೂ ಪೂರ್ಣ ಹೊಂದುವುದು. ವಟುವಿನ ಬಳಿಯಲ್ಲಿ ಯಜ್ಞೋಪವೀತ, ಕೌಪೀನಗಳು ಮಾತ್ರ ಉಳಿದಿರುವವು. ಇಂಥ ವಟುವಿನ ತಂದೆತಾಯಿಗಳು ಶ್ರೀಮಂತರಾದರೆ ಅವನ ಸಮಾವರ್ತನವೂ ಅಲ್ಪ ಕಾಲದಲ್ಲಿಯೇ ಒಮ್ಮೊಮ್ಮೆ ಒಂದೆರಡು ದಿನಗಳಲ್ಲೇ ಆಗಿ ಅವನು ಕಾಶೀಯಾತ್ರೆಗೆ ಹೋಗುವ ನಾಟಕವೂ, ಅವನನ್ನು ಅಡ್ಡಗಟ್ಟುವ ವಿನೋದಕರ ಕ್ರಮವೂ ನಡೆದು ಆ ಹತ್ತೆಂಟು ವರ್ಷದ ಬಾಲಕನು ಗೃಹಸ್ಥನಾಗಲು ಸಿದ್ಧನಾಗುವನು. ಈ ಪರಿಸ್ಥಿತಿಯು ಆರ್ಯವಂಶಜರಾದ ದ್ವಿಜರಿಗೆ ನಿಂದ್ಯವಾದದ್ದು. ಇದಲ್ಲದೆ ಮುಂದಿನ ಯಾವತ್ತು ಆಶ್ರಮಗಳಿಗೆ ಮೂಲವಾದ ಬ್ರಹ್ಮಚರ್ಯವು ಸರಿಯಾಗಿ ಪಾಲಿಸಲ್ಪಡದೆ ಇಹಪರಲೋಕಗಳ ಸುಖಸಂಪತ್ತಿನ ಅಧಿಕಾರವನ್ನು ನಾವೇ ಕಳಕೊಂಡಂತಾಗುತ್ತದೆ. ಕಾರಣ ನಮ್ಮ ಸಂಸ್ಕಾರವಿಧಿಯನ್ನು ನಾವೇ ಹೀಯಾಳಿಸಿದಂತಾಗದ ಹಾಗೆ ಈ ಪರಿಸ್ಥಿತಿಯಲ್ಲಿ ಸುಧಾರಣೆಯಾಗುವದು ಅತ್ಯವಶ್ಯವು.

*(ಮುಂದುವರಿಯುವುದು)*

*PAGE DONATED BY : **AKADAS & FAMILY***

# ಆರ್ಥಿಕ ಭದ್ರತೆಗೆ ಬೇಕಾದ ಜೀವನಶೈಲಿ : ಒಂದು ಚಿಂತನೆ

✍ ಡಾ. ಜಿ. ವಿ. ಜೋಶಿ

*(ಹಿಂದಿನ ಸಂಚಿಕೆಯಿಂದ)*

ಕರ್ನಾಟಕ ರಾಜ್ಯ ತನ್ನ ಐವತ್ತನೇ ವರ್ಷದ (2006) ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದ ಕಾಲದಲ್ಲಿ ಹೆಚ್ಚು ಪ್ರಚಾರಕ್ಕೆ ಬಂದಿದ್ದು ಇಲ್ಲಿ ಆದ ಬ್ಯಾಂಕಿಂಗ್ ಕ್ಷೇತ್ರದ ಬೆಳವಣಿಗೆ. ಪ್ರಾದೇಶಿಕ ಅಭಿವೃದ್ಧಿಗೆ ಇಲ್ಲಿಯ ಬ್ಯಾಂಕುಗಳು ತಮ್ಮದೇ ಆದ ಕೊಡುಗೆಗಳನ್ನು ನೀಡುತ್ತ ಬಂದಿದ್ದು ಅಪ್ಪಟ ಸತ್ಯ. ತಿಂಗಳಾಯರೇ ತಿಳಿಸಿದಂತೆ ಕರ್ನಾಟಕ ರಾಜ್ಯದ ಬ್ಯಾಂಕುಗಳು ನೆರೆಯ ರಾಜ್ಯಗಳು ಮತ್ಸರ ಪಡಬಹುದಾದ ಪ್ರಗತಿಯನ್ನು ಸಾಧಿಸಿದ್ದು ದಾಖಲೆಗೆ ಸೇರಿದೆ. ಕೆನರಾ ಬ್ಯಾಂಕ್ 2006ರಲ್ಲಿ ತನ್ನ ಕಾರ್ಯಾಚರಣೆಯನ್ನು ಪ್ರಚುರ ಪಡಿಸುವಾಗ " ಸುದೃಢ ಕಾರ್ಯನಿರ್ವಹಣೆ, ಅತ್ಯುತ್ತಮ ಫಲಿತಾಂಶ" ಎನ್ನುವ ಘೋಷಣೆ ಹೊರಡಿಸಿತ್ತು, ಆಗಲೇ ಸಾಮಾನ್ಯ ಗ್ರಾಹಕರ ಉಳಿತಾಯ ಪ್ರವೃತ್ತಿಯನ್ನು ಕೇಂದ್ರ ಬಿಂದುವನ್ನಾಗಿ ಪರಿಗಣಿಸಿತ್ತು. ತನ್ನ ಗ್ರಾಹಕ ವರ್ಗದಲ್ಲಿದ್ದ ಉಳಿತಾಯ ಪ್ರವೃತ್ತಿಗೆ ಪ್ರೋತ್ಸಾಹ ನೀಡುವ ಉದ್ದೇಶ ಹೊಂದಿದ ಸಿಂಡಿಕೇಟ್ ಬ್ಯಾಂಕ್ ತನ್ನ 2006ರ ಹಣಕಾಸು ವರ್ಷದ ಪ್ರಯಾಣವನ್ನು "ನಿರಂತರ ಪ್ರಯಾಣ ಪ್ರಗತಿಯತ್ತ " ಎಂದು ಸಾರಿತ್ತು. ಈಗಲೂ ಖಾಸಗಿ ರಂಗದಲ್ಲಿ ಹೆಸರು ಮಾಡಿರುವ ಕರ್ನಾಟಕ ಬ್ಯಾಂಕು ಬೆಳೆದಿದ್ದು ಜನಸಾಮಾನ್ಯರಲ್ಲಿದ್ದ ಉಳಿತಾಯ ಮಾಡುವ ಪ್ರವೃತ್ತಿಯನ್ನು ಹುರಿದುಂಬಿಸಿದ್ದರಿಂದ ಎನ್ನುವುದು ಬ್ಯಾಂಕಿನ ಇತಿಹಾಸ ಓದುವುದರಿಂದ ಕಂಡುಬರುತ್ತದೆ. ಬೆಳಗಾವಿ ಜಿಲ್ಲೆಯಲ್ಲಿ ಬ್ಯಾಂಕುಗಳು ಮೂಲಸೌಕರ್ಯಗಳ ಕೊರತೆಯಿದ್ದರೂ ಜನರ ಉಳಿತಾಯ ಸಂಗ್ರಹ ಮಾಡುವಲ್ಲಿ ಹಿಂದೆ ಬಿದ್ದಿಲ್ಲ. ಹಲವಾರು ಸ್ಥಳೀಯ ಬ್ಯಾಂಕುಗಳು ಮುಂಬಯಿ-ಕರ್ನಾಟಕ ಪ್ರದೇಶದಲ್ಲಿ ಸಾಗಾಟ-ಸಂಪರ್ಕದ ಸಮಸ್ಯೆಯಿದ್ದರೂ ಸ್ವಲ್ಪವಾದರೂ ಬೆಳೆದದ್ದು ಜನಸಾಮಾನ್ಯರ ಉಳಿತಾಯವನ್ನು ಸಂಗ್ರಹ ಮಾಡಿದ್ದರಿಂದಲೇ. ಕರ್ನಾಟಕದಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಕೂಡ ಪ್ರಥಮ ಹಂತದಲ್ಲಿ ಬೆಳವಣಿಗೆ ಸಾಧಿಸಿದ್ದು ಸಾಮಾನ್ಯ ಜನರ ಉಳಿತಾಯ ಮಾಡುವ ಗುಣಕ್ಕೆ ಪ್ರೋತ್ಸಾಹ ನೀಡಿದ್ದರಿಂದ ಎನ್ನುವುದು ದಾಖಲೆಯಲ್ಲಿರುವ ಸಾಧನೆ.

ಕೃಷಿಗೆ ಮಹತ್ವಕೊಡುವ ಯಾವ ಸಾಮಾಜಿಕ ವ್ಯವಸ್ಥೆಯಾದರೂ ಧೈರ್ಯ ಹುಟ್ಟಿಸುವ ನಾಳೆ ಬರಬೇಕಾದರೆ ಇಂದು ಉಳಿತಾಯ ಮಾಡಬೇಕಾದ ಅಗತ್ಯವನ್ನು ತೋರಿಸುತ್ತದೆ. ವಿಶ್ವಕವಿ ರವೀಂದ್ರನಾಥ ಟಾಗೋರರು ಶಾಂತಿನಿಕೇತನ ಮತ್ತು ಶ್ರೀನಿಕೇತನಗಳಲ್ಲಿ ಕಟ್ಟಿಬೆಳೆಸಿದ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೃಷಿ, ಭೂನಿರ್ವಹಣೆ ಮತ್ತು ಗ್ರಾಮೀಣ ಜನತೆಯ ಉತ್ಪಾದಕತೆಯ ರಂಗಗಳಲ್ಲಿ ತಂತ್ರಜ್ಞಾನಾಧಾರಿತ ಪ್ರಯೋಗಗಳನ್ನು ಮಾಡಿದ್ದರು. ಆದರೂ ಅಭಿವೃದ್ಧಿ ವಿಚಾರದಲ್ಲಿ ದೇಶ ಸ್ವಂತಿಕೆಯನ್ನು ಕಾಪಾಡಿಕೊಳ್ಳಬೇಕೆಂದು ಅವರು ಹೇಳಿದ್ದು ಅರ್ಥಪೂರ್ಣವಾಗಿದೆ. "ಪರಮಾತ್ಮ ಬೇರೆ ಬೇರೆ ದೇಶಗಳಿಗೆ ಬೇರೆ ಬೇರೆ ಪ್ರಶ್ನೆ ಪತ್ರಿಕೆಗಳನ್ನು ನೀಡಿದ್ದು ನಕಲು ಹೊಡೆಯುವುದರಿಂದ ಪ್ರಯೋಜನ ವಾಗದು" ಎಂದು ಟಾಗೋರರು ಹೇಳಿದ್ದು ಸರಿಯಾಗಿದೆ. ಆರ್ಥಿಕ ಸುಧಾರಣೆಗಳು ಜಾರಿಯಾದ (1991) ನಂತರ ಕೃಷಿ ರಂಗ ನಿರ್ಲಕ್ಷ್ಯಗೊಳಗಾಗಿ ಸಾಂಪತ್ತಿಕ ಸ್ಥಿತಿ ರಹಿತರಾದ, ಸಾಲದಲ್ಲಿ ಮುಳುಗಿಹೋದ ಅಸಂಖ್ಯಾತ ಸಣ್ಣ ಮತ್ತು ಅತಿಸಣ್ಣ ರೈತರು ಆತ್ಮಹತ್ಯೆಗೆ ಶರಣಾಗಬೇಕಾಯಿತು. ಆಗಲೇ ಇಷ್ಟು ದೊಡ್ಡ ದೇಶ ಯಾವ ಕಾರಣಕ್ಕೂ ಕೃಷಿಯನ್ನು ಅಲಕ್ಷಿಸುವಂತಿಲ್ಲವೆಂದು ತಿಳಿಯುವಂತಾಯಿತು. ಹಿಂದೆ ಪ್ರಧಾನಿಗಳಾಗಿದ್ದ ಎ.ಬಿ. ವಾಜಪೇಯಿ ಮತ್ತು ಮನಮೋಹನ್ ಸಿಂಗರು ಮತ್ತು ಈಗ ಪ್ರಧಾನಿಯಾಗಿರುವ ನರೇಂದ್ರ ಮೋದಿ ಬಯಸಿದ ದ್ವಿತೀಯ ಹಸಿರು ಕ್ರಾಂತಿಯಾಗಬೇಕಾದರೆ ರೈತಸಮುದಾಯ ಸುಭದ್ರ ನಾಳೆಯ ಆಗಮನಕ್ಕಾಗಿ ಇಂದೇ ಉಳಿತಾಯದ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕಾಗಿದೆ. ಈಗಿನ ಸ್ಥಿತಿ-ಗತಿಯಲ್ಲಿ ಕೊಳ್ಳುಬಾಕ ಸಂಸ್ಕೃತಿ ನಮ್ಮ ಸಣ್ಣ ಮತ್ತು ಅತಿಸಣ್ಣ ರೈತರ ಸಾಂಖ್ಯಿಕ ಪ್ರಾಧಾನ್ಯವುಳ್ಳ ಕೃಷಿ ಆಧಾರಿತ ಸಾಮಾಜಿಕ-ಸಾಂಸ್ಕೃತಿಕ ವ್ಯವಸ್ಥೆಗೆ ಹೇಳಿಸಿದ್ದೇ ಅಲ್ಲ.



ಯಾವ ಅಭಿವೃದ್ಧಿ ಸಿದ್ಧಾಂತವೇ ಆಗಿರಲಿ, ಅದು ಸಾರ್ವಕಾಲಿಕ ಸತ್ಯವಾಗಲು ಸಾಧ್ಯವಿಲ್ಲವೆಂಬ ವಿಚಾರವನ್ನು ಮತ್ತೊಮ್ಮೆ ಒಪ್ಪಿಕೊಂಡು ನಾವು ಇಪ್ಪತ್ತನೆಯ ಶತಮಾನದ ಕೆಲವು ಸಿದ್ಧಾಂತಗಳನ್ನು ಪರೀಕ್ಷಿಸಬಹುದು. ಆಸ್ಟ್ರಿಯಾದ ಜೋಸೆಫ್ ಶುಂಪಿಟರ್ ಅವರ ಪ್ರಕಾರ ಸಂಘಟನೆ ಮತ್ತು ಆವಿಷ್ಕಾರಗಳು ಅಭಿವೃದ್ಧಿ ಪ್ರಕ್ರಿಯೆಗೆ ಪ್ರೇರಕ ಶಕ್ತಿಗಳು. ಇದಕ್ಕೆ ಒಡೆತನಕ್ಕಿಂತ ನಾಯಕತ್ವ ಹೆಚ್ಚು ಮಹತ್ವದ್ದೆಂದು ಅವರು ವಾದಿಸಿದರೂ ಕಡ್ಡಾಯ ಉಳಿತಾಯಗಳು ಹೊಸ ಉದ್ಯಮಿಗಳಿಗೆ ಬೇಕಾದ ನಿಧಿಯನ್ನು ಒದಗಿಸುತ್ತವೆ ಎಂದು ಹೇಳಿದ್ದನ್ನು ನೆನಪಿಸಿಕೊಳ್ಳಬೇಕಾಗಿದೆ. ಇಂಗ್ಲೆಂಡಿನ ಆರ್.ಎಫ್. ಹ್ಯಾರಡ್ ಮತ್ತು ಅಮೇರಿಕೆಯ ಇ.ಡೋಮರ್ ಮಂಡಿಸಿದ ಅಭಿವೃದ್ಧಿ ಸಿದ್ದಾಂತದಲ್ಲಿ ಉಳಿತಾಯ ಮತ್ತು ಹೂಡಿಕೆ ಪ್ರಕ್ರಿಯೆಗಳ ಪರಸ್ಪರ ಸಂಬಂಧದ ಮಹತ್ವವನ್ನು ತೋರಿಸಲಾಗಿದೆ. ಅಮೇರಿಕೆಯ ಆರ್ಥಿಕ ತಜ್ಞ ಡಬ್ಲೂ.ಡಬ್ಲೂ. ರಾಸ್ಟೋ ಅವರು ಅಭಿವೃದ್ಧಿಯ ಹಂತಗಳನ್ನು ಗುರುತಿಸುವಾಗ ಒಂದು ಹಂತದಲ್ಲಿ ಅಭಿವೃದ್ಧಿಯ ವೇಗವನ್ನು ಕಾಯ್ದುಕೊಂಡು ಅದಕ್ಕೆ ಹೆಚ್ಚಿನ ಶಕ್ತಿ ತುಂಬಲು ಬೇಕಾದ ಸಾಂಸ್ಥಿಕ ಚೌಕಟ್ಟಿನ ಅಗತ್ಯವನ್ನು ವಿವರಿಸುತ್ತಾರೆ. ಜತೆಗೆ ಜನರ ಉಳಿತಾಯವನ್ನು ಸಂಗ್ರಹ ಮಾಡಬೇಕಾದ ಅಗತ್ಯವನ್ನು ತಿಳಿಸುತ್ತಾರೆ. ಜೋನ್ ರಾಬಿನ್ಸನ್ ಮಂಡಿಸಿದ ನವ ಸಂಪ್ರದಾಯ ಬೆಳವಣಿಗೆಯ ಮಾದರಿ ಉಳಿತಾಯ ಯಾವಾಗಲೂ ಬಂಡವಾಳ ಹೂಡಿಕೆಗೆ ಸಮನಾಗಿರಬೇಕೆಂದು ತಿಳಿಸುತ್ತದೆ. ಅಂದರೆ ಇದು ಉಳಿತಾಯದ ಅಗತ್ಯ ಮತ್ತು ಮಹತ್ವವನ್ನು ಸಿದ್ಧಾಂತದ ರೂಪದಲ್ಲಿ ಸಾರುತ್ತದೆ. ನಮ್ಮ ಕೇಂದ್ರ ಸರಕಾರದ ಹಣಕಾಸಿನ ವಿಭಾಗ ವಾರ್ಷಿಕ ಬಜೆಟ್ ಮಂಡನೆ ಮೊದಲು ಸಂಸತ್ತಿನಲ್ಲಿ ಮಂಡಿಸಲ್ಪಡುವ ಆರ್ಥಿಕ ಸಮೀಕ್ಷೆ ಒಂದಲ್ಲ ಒಂದು ರೀತಿಯಲ್ಲಿ ಆಂತರಿಕ ಉಳಿತಾಯದ ಪ್ರಮಾಣ ಹೆಚ್ಚಾಗಬೇಕೆಂದು ತಿಳಿಸುತ್ತಿರುವುದು ಸುಳ್ಳಲ್ಲ.

### ಸಮಸ್ಯೆಗಳ ಸುಳಿಗೆ ಕಾರಣವಾದ ಸಾಲ ಮನ್ನಾ ಪ್ರಯೋಗ

ಸಾಲಮನ್ನಾ ನೀತಿ ಬೇಜವಾಬ್ದಾರಿ ಪ್ರವೃತ್ತಿಯನ್ನು ಬೆಳೆಸಿದ್ದು ಕೊಳ್ಳುಬಾಕ ಸಂಸ್ಕೃತಿಯಂತೆ ಅಪಾಯಕಾರಿಯಾಗಿದೆ. 1970 ಮತ್ತು 80ರ ದಶಕಗಳಲ್ಲಿ ರೈತರ ಮೂಲ ಸಮಸ್ಯೆಗಳನ್ನು ಪರಿಹರಿಸಲು ವಿಫಲವಾದ ರಾಜ್ಯ ಸರಕಾರಗಳು ಸಾಲ ಮನ್ನಾ ಮಾಡುವ ಹವ್ಯಾಸ ಬೆಳೆಸಿಕೊಂಡವು. ಇದರಿಂದ ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿ ಮಾಡುವ ರೈತ ಸಮುದಾಯದ ಮೂಲ ಸಂಸ್ಕೃತಿಗೆ ಧಕ್ಕೆಯಾಗಿದೆ. ಆರನೇ ಪಂಚವಾರ್ಷಿಕ

*PAGE DONATED BY : **SHRI ROKESH HEGDE & FAMILY, DAHISAR***

ಯೋಜನೆಯ (1980-85) ದಾಖಲೆ ಪತ್ರ ಸಾಲ ಮನ್ನಾ ಯೋಜನೆಗಳನ್ನು ಸಾರದಂತೆ ನೀಡಿದ ಎಚ್ಚರಿಕೆಯನ್ನು ರಾಜ್ಯ ಸರಕಾರಗಳು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. ಏಳನೇ ಯೋಜನೆ (1985-90) ಸಹ ಸಾಲಮನ್ನಾ ಪರಿಪಾಠದ ವಿರುದ್ಧ ನೀಡಿದ ಎಚ್ಚರಿಕೆಯನ್ನು ರಾಜ್ಯ ಸರಕಾರಗಳು ಸುರಕ್ಷಿತ ನಿರ್ಲಕ್ಷಿಸಿದವು. 1990ರಲ್ಲಿ ಕೇಂದ್ರ ಸರಕಾರವೇ ಆಸಕ್ತಿವಹಿಸಿ ಕೃಷಿ ಮತ್ತು ಗ್ರಾಮೀಣ ಸಾಲ ಮನ್ನಾ ಯೋಜನೆಯನ್ನು ಘೋಷಿಸಿದಾಗ ಪ್ರಮಾದಗಳ ಸರಪಳಿ ನಿರ್ಮಾಣವಾಗಿ ಸಾಲಗಳ ದುರುಪಯೋಗಕ್ಕೆ ದಾರಿಯಾಯಿತು. ಕಾಲ ಕ್ರಮೇಣ ಕೃಷಿಕರ ಮಟ್ಟದಲ್ಲಿ ಅದು ಮುಂದಾಲೋಚನೆಯಿಲ್ಲದ ವೆಚ್ಚಗಳಿಗೆ ಮಾರ್ಗ ನಿರ್ಮಾಣ ಮಾಡಿದ್ದು ಕೂಡ ಸತ್ಯವೇ.

2008-09ರ ಕೇಂದ್ರ ಬಜೆಟ್‌ನಲ್ಲಿ ಘೋಷಣೆಯಾದ ಸಾಲ ಮನ್ನಾ ಯೋಜನೆ ಒಂದು ಅಂದಾಜಿನ ಪ್ರಕಾರ 70 ಸಾವಿರ ಕೋಟಿ ರೂ. ಗಳಿಗೂ ಮಿಕ್ಕಿದ ಮೊತ್ತದ ಭಾರವನ್ನು ದೇಶದ ಆರ್ಥಿಕತೆಯ ಮೇಲೆ ಹೇರಿತ್ತು. ಐದು ವರ್ಷಗಳ ನಂತರ ಅದರ ವೈಫಲ್ಯಗಳು ಬೆಳಕಿಗೆ ಬಂದವು. 2013ರ ಮಹಾ ಲೇಖಪಾಲರ (ಸಿಎಜಿ) ವರದಿ ತಿಳಿಸಿದಂತೆ ಕೃಷಿಯೇತರ ಉದ್ದೇಶಗಳಿಗಾಗಿ ರೈತರು ಪಡೆದುಕೊಂಡ ಸಾಲಗಳನ್ನು ಅಥವಾ ಮನ್ನಾ ಆಗುವ ಅರ್ಹತೆಯಿಲ್ಲದ ಕೃಷಿಸಾಲಗಳನ್ನು ಈ ಯೋಜನೆಯಡಿಯಲ್ಲಿ ಮನ್ನಾ ಮಾಡಲಾಗಿತ್ತು. ಅದೇ ವೇಳೆ ಮನ್ನಾ ಮಾಡಲೇಬೇಕಾದ ಸಾಲಗಳನ್ನು(ಸಣ್ಣ ಮತ್ತು ಅತಿ ಸಣ್ಣ ರೈತರ ಸಾಲಗಳೂ ಸೇರಿದಂತೆ) ಬ್ಯಾಂಕುಗಳು ಪರಿಗಣಿಸಿಯೇ ಇರಲಿಲ್ಲ. ಸಾಲ ಮನ್ನಾ ನಿಯಮಾವಳಿಯನ್ನು ಉಲ್ಲಂಘಿಸಿ ಸರ್ಕಾರಿ ಬ್ಯಾಂಕುಗಳೇ ಸರ್ಕಾರದಿಂದ ಸಾಕಷ್ಟು ಮೊತ್ತವನ್ನು ಪರಿಹಾರ ರೂಪದಲ್ಲಿ ಕಬಳಿಸಿದ್ದವು! 2014ರ ಡಿಸೆಂಬರ್ ತಿಂಗಳಿನಲ್ಲಿ 70ನೇ ಸುತ್ತಿನ ರಾಷ್ಟ್ರೀಯ ಮಾದರಿ ಸಮೀಕ್ಷೆ ವರದಿ ಶೇ. 50ರಷ್ಟು ರೈತ ಕುಟುಂಬಗಳು ಸಾಲದಲ್ಲಿ ಮುಳುಗಿದ್ದನ್ನು ಪ್ರಚುರಪಡಿಸಿತ್ತು. ಅಲ್ಲಿಗೆ ಸಾಲ ಮನ್ನಾ ಯೋಜನೆಗಳಿಂದ ರೈತರಿಗೆ ಸಿಗಬೇಕಾದ ಲಾಭ ಸಿಗಲಿಲ್ಲವೆನ್ನುವುದು ಸ್ಪಷ್ಟವಾಯಿತು. ಸಾಲ ಮನ್ನಾ ಜಾರಿಗೆ ಬಂದ ಎಲ್ಲಾ ರಾಜ್ಯಗಳಲ್ಲಿ ಇದು ಸಾರ್ವಜನಿಕ ಬೊಕ್ಕಸಕ್ಕೆ ಭಾರವಾದ ವೆಚ್ಚಕ್ಕೆ ಕಾರಣವಾಯಿತೇ ಹೊರತು ಬೇರೇನೂ ಆಗಲಿಲ್ಲ. ಮಿತವ್ಯಯ ಪ್ರವೃತ್ತಿಗೆ ವ್ಯತಿರಿಕ್ತವಾದ ವಾತಾವರಣ ಸೃಷ್ಟಿಗೆ ಹಾದಿ ಮಾಡಿದ್ದರಿಂದಲೇ ಒಂದು ಸಾಲ ಮನ್ನಾ ಇನ್ನೊಂದು ಸಾಲ ಮನ್ನಾಕ್ಕೆ ಒತ್ತಡ ಸೃಷ್ಟಿಸಲು ಕಾರಣವಾಗಿದೆ. ಸಾಲದ ರೂಪದಲ್ಲಿ ಬಂದ ಹಣದ ಅಪವ್ಯಯವಾಗಿದೆ. ಸ್ವಲ್ಪ ಮಟ್ಟಿಗೆ ಕೊಳ್ಳುಬಾಕ ಸಂಸ್ಕೃತಿಯನ್ನು ಪ್ರಚೋದಿಸಲು ಕೂಡ ಕಾರಣವಾಗಿದೆಯೆಂದು ಹೇಳಬೇಕಾಗಿದೆ.

ಸಾಲ ಮನ್ನಾ ಒಂದು ಶಾಶ್ವತ ಪರಿಹಾರವಲ್ಲವೆನ್ನುವುದಕ್ಕೆ ಅದು ಅಧಿಕೃತವಾಗಿ ಜಾರಿಯಾದ ನಂತರವೂ ಪಂಜಾಬ್ ಮತ್ತಿತರ ರಾಜ್ಯಗಳಲ್ಲಿ ಮುಂದುವರಿದ ರೈತರ ಆತ್ಮಹತ್ಯೆಗಳೇ ಸಾಕ್ಷಿ. ರೈತರ ಬದುಕು ಹಸನಾದರೆ ಖಂಡಿತ ಅವರು ಸಾಲಮನ್ನಾದ ಬೇಡಿಕೆ ಇಡುವದಿಲ್ಲ. ಸಾಲ ಮನ್ನಾ ಮಾಡಿದ ನಂತರ ಅದು ಸರಕಾರದ ಮಹಾ ಸಾಧನೆ ಎಂದು ಬಿಂಬಿಸುವ ಜಾಹೀರಾತುಗಳು ಕೆಲವು ದೈನಿಕಗಳಲ್ಲಿ ಪ್ರಕಟವಾಗಿ ಸಾರ್ವಜನಿಕ ಹಣ ಇನ್ನಷ್ಟು ಪೋಲಾಗುತ್ತದೆ. ಬಹುಮತದ ಬಲದಲ್ಲಿ ಸರಕಾರ ನಡೆಸುವ ರಾಜಕೀಯ ಪಕ್ಷಗಳು ರೈತರನ್ನು ತೀರ ಹಗುರವಾಗಿ ಕಾಣುವ ಅಪಾಯಕಾರಿ ಪ್ರವೃತ್ತಿ ಬೆಳೆಯುತ್ತಿದೆ. ಆಗ ಸಹಜವಾಗಿ ವೈಯಕ್ತಿಕ ಹಿತ ಹಾಗೂ ರಾಷ್ಟ್ರದ ಆರ್ಥಿಕ ಭದ್ರತೆಯ ನಡುವಿನ ಅವಿನಾಭಾವ ಸಂಬಂಧಕ್ಕೆ ಧಕ್ಕೆಯಾಗಿ ಸಾರ್ವಜನಿಕ ಹಣಕಾಸಿಗೆ ವಿಪತ್ತು ತಗಲುತ್ತಿದೆ. ವಿತ್ತೀಯ ನೀತಿಗೆ ದಿಕ್ಕು ದೆಸೆ ಇಲ್ಲದಂತಾಗಿ ಹೋಗುತ್ತದೆ.

ಕರ್ನಾಟಕದಲ್ಲೂ ಸಾಲ ಮನ್ನಾ ಕಸರತ್ತುಗಳು ಆಗಾಗ ನಡೆದು ಹೋಗಿದ್ದು ಈ ಕಸರತ್ತುಗಳಿಂದ ಆದ ಲಾಭಕ್ಕಿಂತ ನಷ್ಟ ಎಷ್ಟೋ ಹೆಚ್ಚು. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ರಾಜ್ಯ ಸರಕಾರ ಘೋಷಿಸಿದ ಸಾಲ ಮನ್ನಾ ದುರುಪಯೋಗವಾದ ಹಲವಾರು ಪ್ರಕರಣಗಳು ಬಯಲಾದವು. ರಾಜ್ಯದ ವಿತ್ತೀಯ ಬೊಕ್ಕಸದ ಮೇಲೆ ಭಾರವಾಗಿದ್ದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಎಚ್. ಡಿ. ಕುಮಾರಸ್ವಾಮಿ ಜೆಡಿಎಸ್-ಕಾಂಗ್ರೆಸ್ ಮೈತ್ರಿ ಸರಕಾರದಲ್ಲಿ ಮುಖ್ಯಮಂತ್ರಿಯಾಗಿದ್ದಾಗ 2018ರಲ್ಲಿ ಒಟ್ಟು 34 ಸಾವಿರ ಕೋಟಿ ರೂ. ಗಳ ರೈತರ ಸಾಲ ಮನ್ನಾ ಮಾಡಿದ್ದರಿಂದ 'ಮನ್ನಾಭಾಯ್' ಎನಿಸಿಕೊಂಡು ಧನ್ಯರಾದರು ! ಆದರೆ ಅವರು ಕೊರತೆಯನ್ನು ನೀಗಲು ಪರದಾಟ ಮಾಡಲೇ ಬೇಕಾಯಿತು. ಪೆಟ್ರೋಲ್, ಡೀಸೆಲ್ ದುಬಾರಿ ಮಾಡಬೇಕಾಯಿತು. ವಿದ್ಯುತ್ ದರವನ್ನು ಏರಿಸಬೇಕಾಯಿತು. ವಾಹನ ನೋಂದಣಿ ತೆರಿಗೆಯನ್ನು ಹೆಚ್ಚಿಸ ಬೇಕಾಯಿತು. ಒಟ್ಟಾರೆ ಸಾಲ ಮನ್ನಾ ಸಾಧನೆಯಾಗುವ ಬದಲು ಅನೇಕರಿಗೆ ವೇದನೆಯಾಯಿತು. ಅದರ ಲಾಭ ತಲುಪಬೇಕಾದವರನ್ನು ತಲುಪಲಿಲ್ಲವೆಂಬ ಕೊರಗು ಉಳಿದುಕೊಂಡಿದೆ. ಹೇಗೇಗೋ ಸಾಲ ಮನ್ನಾ ಮಾಡಿಸಿಕೊಳ್ಳುವಲ್ಲಿ ಕೈಚಳಕ ಪ್ರದರ್ಶಿಸಿದ ಕೃಷಿಕರು ಈಗ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅನೇಕ ಸಾರ್ವಜನಿಕ ಹಣದ ದುರುಪಯೋಗವಾದ ಪ್ರಕರಣಗಳು ಹಿಂದಿನಂತೆ ಈಗಲೂ ಬೆಳಕಿಗೆ ಬಂದಿವೆ. ಈಗ ವೈಯಕ್ತಿಕ ಹಿತ ಮತ್ತು ರಾಜ್ಯದ ಆರ್ಥಿಕ ಭದ್ರತೆಯ ನಡುವಿನ ಸಂಬಂಧ ಇರಬೇಕಾದ ರೀತಿಯಲ್ಲಿ ಇಲ್ಲವಾದ್ದರಿಂದ ಕರ್ನಾಟಕದ ಆರ್ಥಿಕತೆ ಸಂಕಷ್ಟದಲ್ಲಿದೆ.

ಯುಪಿಎ ಅವಧಿಯಲ್ಲಾದ ಸಾಲ ಮನ್ನಾ ಅವಾಂತರಗಳನ್ನು ತಿಳಿಸುತ್ತ ಭಾರತೀಯ ರಿಸರ್ವ್ ಬ್ಯಾಂಕಿನ ಮಾಜಿ ಗವರ್ನರ್ ರಘುರಾಂ ರಾಜನ್ ಬೇಕಾಬಿಟ್ಟಿ ಸಾಲ ವಿತರಣೆ ಮತ್ತು ಮನ್ನಾದಂತಹ ಮುಂದಾಲೋಚನೆಯಿಲ್ಲದ ನಿರ್ಧಾರಗಳಿಂದ ವಸೂಲಾಗದ ಸಾಲದ ಸಮಸ್ಯೆ (ಎನ್.ಪಿ.ಎ) ಮತ್ತಷ್ಟು ಹೆಚ್ಚಲಿದೆಯೆಂದು 2018ರಲ್ಲಿ ಎಚ್ಚರಿಕೆ ನೀಡಿದ್ದರು. ಸಾಲ ಮನ್ನಾ ಒತ್ತಡಕ್ಕೆ ಸ್ವಲ್ಪವೂ ಜಗ್ಗದ, ಬಗ್ಗದ ನರೇಂದ್ರ ಮೋದಿ ಸರಕಾರ ಕೋವಿಡ್-19 ಸಾಂಕ್ರಾಮಿಕದ ಪರಿಣಾಮವಾಗಿ ಸಾಲ ಮರುಪಾವತಿಸುವಲ್ಲಿ ತೊಂದರೆ ಎದುರಿಸುತ್ತಿರುವವರಿಗೆ ಮರು ಹೊಂದಾಣಿಕೆಯ ಅವಕಾಶಮಾಡಿಕೊಟ್ಟಿರುವುದು ಸಮರ್ಪಕವಾದ, ಪ್ರಶಂಸಾರ್ಹ ನೀತಿ. ಕೃಷಿಯೇತರ ರಂಗಗಳಲ್ಲಿ ಸಾಲ ಮರುಹೊಂದಾಣಿಕೆಗೆ ಅರ್ಹರಾಗಿರುವ ಸಾಲಗಾರರನ್ನು ಗುರುತಿಸಿ ಅವರನ್ನು ಸಂಪರ್ಕಿಸುವ ಕೆಲಸ ಈಗ ಆಗುತ್ತಿದೆ. ಇದು ಆಗಬೇಕಾದ ಕೆಲಸವೇ ಹೊರತು ಸಾರಾ ಸಗಟಾಗಿ ಸಾಲ ಮನ್ನಾ ಮಾಡುವುದರಿಂದ ತಾರ್ಕಿಕ ಹಿನ್ನೆಲೆ ಇಲ್ಲದ, ವಿವೇಚನಾರಹಿತ ಖಾಸಗೀ ವೆಚ್ಚಕ್ಕೆ ಹಾದಿ ಮಾಡಿಕೊಟ್ಟಂತಾಗುತ್ತದೆ. ಕೃಷಿ ರಂಗದಲ್ಲಾಗಲಿ, ಕೃಷಿಯೇತರ ರಂಗದಲ್ಲಾಗಲಿ ಸಾಲ ಮನ್ನಾ ಮಾಡುವುದು ಕೂಡ ಒಂದು ಸಾಧನೆಯೆಂದು ಪರಿಗಣಿಸಲು ಸಾಧ್ಯವೇ ನಮ್ಮ ಈ ಬೃಹತ್ ದೇಶದಲ್ಲಿ?

*(ಮುಂದುವರಿಯುವುದು)*

(Improved version of the invited article published in Utthana, Special issue of Jan. 2021)

*(ಆಹ್ವಾನಿತ ಲೇಖನ ಉತ್ಥಾನ ಜನವರಿ 2021)*

*PAGE DONATED BY :* ***SHRI ANANT GANESH BHAT, BANDRA & FAMILY***

# ಆನಂದಿ ಭಾಗ್ಯ

(ಹವಿಗನ್ನಡ)

✍ ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ

ನಂಗ್ಳಲ್ಲಿ, ಇಡು ಹೆಸ್ರಿಗೂ, ಅವ್ರ ಲಕ್ಷಣಕ್ಕೂ ಸಂಬಂಧವೇ ಇರ್ತಿಲ್ಲೆ. ಹೆಸ್ರು ನಾಗವೇಣಿ. ಜಡೆ ಮಾತ್ರ ಚೋಟುದ್ದ. ಹೆಸ್ರು ಸುಶೀಲೆ, ಸ್ವಲ್ಪನೂ ಶೀಲ ಇರ್ತಿಲ್ಲೆ. ವಿಘ್ನೇಶ್ವರ ಹೋದಲೆಲ್ಲ ಅಪಶಕುನಾ? ಒಟ್ಟಾರೆ ಕರೂಲೆ ಹೇಳಿ ಒಂದು ಹೆಸ್ರು ಬೇಕು ಅಷ್ಟೇ.

ಇವತ್ತಿನ ಕಥಾ ನಾಯಕಿ ಹೆಸ್ರೂ ಆನಂದಿ. ಹಾಂಗೇಳಿ ಹುಟ್ಟಾಕಿತ್ತು ತಿನ್ನು ಬಡತನ. ಕಾಷಾಯ-ಲವಣಾಯ ಹೇಳತ್ವಲಿ ಹಾಂಗೆ. ಒಂದಕ್ಕಿದ್ರೆ ಇನ್ನೊಂದಕ್ಕಿಲ್ಲೆ. ಹಾಸುಲಿದ್ರೆ, ಹೊದಕಂಬ್ಲೆ ಇಲ್ಲೆ, ಹೋದಕಂಬ್ಲಿದ್ರೆ, ಹಾಸೂಲಿಲ್ಲೇ ಹೇಳು ಪರಿಸ್ಥಿತಿ.

ಆನಂದಿಯ ದೊಡ್ಡ ಕುಟುಂಬ ಬೇರೆ. ಇಬ್ಬರು ಅಣ್ಣಂದಿಕ್ಕೊ, ಇಬ್ಬರು ತಂಗ್ಯಕ್ಕೊ. ಒಬ್ಬ ತಮ್ಮ ಅವಳ ಮನೆಲ್ಲ ಹೇಳಿಕೊಳ್ಳವಷ್ಟೆ ಜಮೀನು ಆಸ್ತಿಯೂ ಇತ್ತಿಲ್ಲೆ. ಅಲ್ಲಿ ಎಲ್ಲರೂ ಮೈ ಮುರಿದು ದುಡಿತಿದ್ದೊ. ಹಂಗಾಗಿ ಒಪ್ಪತ್ತಿನ ಊಟಕ್ಕೆ ತತ್ವಾರ ಆಗ್ತಿತ್ತೆಲ್ಲೆ. ಬಡವ್ರು ಆಂದ್ರೆ ವಯಸ್ಸಾಗದೇ ಹೋಗ್ತ? ಆನಂದಿಯೂ ಮದುವೆ ವಯಸ್ಸಿಗೆ ಬಂದಿದ್ದು ಅವಳ ಅಣ್ಣ ಗಂಡಿಗಾಗಿ ಹುಡುಕುತ್ತಾ ಇದ್ದ. ಆಗೆಲ್ಲ ಹೆಣ್ಣು ಸಿಕ್ಕುದೇ ಕಷ್ಟದ ಕಾಲ ಆಗಿತ್ತು. ಹಿಂಗಾಗಿ ಹತ್ತಿರದ ಊರಿನ ಮಾಣಿಯೊಂದಿಗೆ ಮದುವೆ ನಿಶ್ಚಯವಾಗಿ, ಮದುವೆಯ ಶಾಸ್ತ್ರವೂ ಮುಗಿದು ಹೋತು. ಹಾಗಂತ ಗಂಡನಮನೆ ಸ್ಥಿತಿಯೂ ತೀರ ಕಷ್ಟಕರವೇ ಇತ್ತು. ಸಂಬಂಧ, ಸಮಾನರಲ್ಲಿ ಹೇಳಿದ ಹಾಗೆ ಬಡವನೋ, ಶ್ರೀಮಂತನೋ ಆನಂದಿ ಮದುವೆ ಹೇಳೂದು ಒಂದು ಆದ್ರೆ ಸಾಕಾಗಿತ್ತು ಅವಳ ಅಣ್ಣಂದಿರಿಗೆ.

ಗಂಡನ ಮನೆಯಲ್ಲಿ ಸ್ವಲ್ಪ ಅಡಿಕೆ ತೋಟ, ಸ್ವಲ್ಪ ಗದ್ದೆ ಇತ್ತು. ಅದರಷ್ಟರಲ್ಲಿಯೇ ಜೀವನ ಸಾಗ್ತಿತ್ತು. ಬರಬರುತ್ತಾ ಆನಂದಿ ಕುಟುಂಬವೂ ದೊಡ್ಡದಾಗುತ್ತಾ ಬಂತು. ಇಬ್ಬರು ಗಂಡು ಮಕ್ಕೋ ಅದೋ. ಈಗ ಮಾತ್ರ ಆನಂದಿ ಪಡುಪಾಟ ಹೇಳಲೇ ಆಗ್ತಿತ್ತಿಲ್ಲೆ. ಪ್ರತಿ ದಿನ ಗಂಡ ಹೆಂಡತಿ ಮಧ್ಯೆ ಜಗಳ. ಕಾರಣ ಬಡತನ. ಆನಂದಿ ಗಂಡ ಕೆಟ್ಟವನೇ ಆಗಿದ್ದ. ಅದರ ಜತೆ ಬೀಡಿ ಸೇದು ಅಭ್ಯಾಸ ಆಗಿ ಹೋಗಿತ್ತು. ಅವನ ಆರೋಗ್ಯವೂ ಕೆಡ್ತಾ ಬಂತು. ದಮ್ಮಿನ ಕಾಟ ಹೆಚ್ಚಾಗಿ ಹೋಗಿತ್ತು. ಮಕ್ಕಳೂ ಇನ್ನೂ ಕೈಗೆ ಬಂದಿದ್ವಿಲ್ಲೆ. ಸಂಸಾರದ ಜವಾಬ್ದಾರಿ ಎಲ್ಲ ಆನಂದಿ ಮೇಲೆ ಬಿದ್ದಿತ್ತು. ಆದಷ್ಟು ಆಚೆ-ಈಚೆ ಮನೆ ಕೆಲಸ ಮಾಡಿ ಅವರು ಕೊಟ್ಟಷ್ಟು ದುಡ್ಡಿನಿಂದ ಅನ್ನ ಅಲ್ಲದಿದ್ದರೂ ಗಂಜಿ ಕುಡಿಯುವಷ್ಟು ಆಗ್ತಿತ್ತು. ಅವಳ ಗಂಡನ ಆರೋಗ್ಯ ಬರಬರ್ತಾ ಇನ್ನೂ ಹದಗೆಟ್ಟು ಒಂದು ದಿನ ಪ್ರಾಣವನ್ನೇ ಬಿಟ್ಟುಬಿಟ್ಟ. ಈಗ ಮಾತ್ರ ಆನಂದಿ ದಿಕ್ಕೇ ಕಾಣ್ದೆ ಪೂರಾ ಸೋತೋಗಿದ್ಲು. ಅವಳ ಪಾಡು ವೈರಿಗೂ ಬೇಡ ಅಂಬಂತಾಗಿತ್ತು. ಇಷ್ಟೇ ಸಾಕಾಗ ಹೇಳ್ದಂಗೆ, ಎರಡನೇ ಮಗ ಮಳೆಗಾಲದಲ್ಲಿ ಒಂದಿನ ಕೆಸರಿನ ಹೊಂಡದಲ್ಲಿ ಬಿದ್ದು ಸತ್ತೇ ಹೋದ. ಕಷ್ಟ ಯಾವಾಗಲೂ ಒಟ್ಟೊಟ್ಟಿಗೇ ಬತ್ತು ಹೇಳೂಲೆ ಆನಂದಿಯೇ ಸಾಕ್ಷಿ ಎಂಬಂತಾಯಿತು. ಕಷ್ಟವೊಂದನ್ನೇ ಕಂಡ ಆನಂದಿ ಹೇಗೋ ಸುಧಾರಿಸಿಕೊಂಡು ಬದುಕು ಸಾಗುವಂತಾಯಿತು. ದೊಡ್ಡ ಮಗ ಶರೀರದಲ್ಲಿ ದಷ್ಟ-ಪುಷ್ಟನಾಗಿದ್ದರಿಂದ ಅಷ್ಟು-ಇಷ್ಟು ಕೆಲಸ ಮಾಡುಲೆ ಶುರು ಮಾಡ್ದ. ಆನಂದಿಗೆ ಈಗ ಸ್ವಲ್ಪ ಖುಷಿ ಅದಂಗೆ ಕಾಣ್ತಿತ್ತು. ಆದರೆ ಈ ಖುಷಿ ಬಹಳ ದಿನ ಉಳಿದ್ದೇ ಇಲ್ಲೆ. ಮಗ ಮದುವೆಯ ಪ್ರಾಯಕ್ಕೆ ಬಂದಿದ್ದರಿಂದ ತನ್ನ ಮದುವೆಗೆ ಅಬ್ಬೆ ಕಾಡ್ತಿದ್ದ. ಬಡವರ ಮನೆ, ಮಗ ಕಾಳಕ್ಷರ ಕಲ್ತವ್ನಲ್ಲ, ಯಾರು ಹೆಣ್ಣು ಕೊಡ್ತೋ ಹೇಳಿ ತಲೆ ಹಾಳು ಮಾಡ್ಕತ್ತಿದ್ದಾಗಲೇ ಯಾರೋ ಒಬ್ಬ ದಲ್ಲಾಳಿಯ ಗುರ್ತು ಆತು. ಆ ದಲ್ಲಾಳಿ ನಾಲ್ಕಾರು ಹೆಣ್ಣುಗಳನ್ನು ಅದೂ ದೂರದ ಊರನವ್ರ ತೋರಿಸಿ, ಎರಡೂ ಕಡೆಯಿಂದ ದುಡ್ಡು ಎಬ್ಬಿಸಿಕೊಂಡು ಕೊನೆಗೊಂದು ಹುಡುಗಿ ನಿಕ್ಕಿ ಮಾಡಿ ಮದುವೆನೂ ಮಾಡ್ಸಿಯೇ ಬಿಟ್ಟ!



ಈಗ ಆನಂದಿ ಮುಖದಲ್ಲಿ ಸ್ವಲ್ಪ ಆನಂದ ಕಂಡಂತೆ ಆಗುತ್ತಿತ್ತು. ಆದರೆ ಬಂದ ಸೊಸೆ ಅತ್ತೆಯನ್ನೇ ಪೀಡಿಸಲು ಶುರು ಮಾಡಿ ಬಿಟ್ಲು. ತಾನೇಳದಾಂಗೆ ಅತ್ತೆ ಮತ್ತು ಗಂಡ ಕೇಳ್ಲೋ, ಮನೆ ಖರ್ಚಿಗೆಲ್ಲ ಅತ್ತೇನೇ ದುಡ್ಡು ತರೋ, ಅವಳೇ ಅಡುಗೆ ಮಾಡೋ, ಅಡಿಗೆ ಆದ ಮೇಲೆ ಗಂಡ-ಹೆಂಡತಿ ಊಟ ಆದ ಮೇಲೆ ಏನಾದ್ರೂ ಉಳಕೊಂಡ್ರೆ ಅದು ಅತ್ತೆಗೆ. ಮೊದಲಾದ್ರೆ, ಮಗನೊಂದೇ ಸಂಭಾಳಿಸುತ್ತಿದ್ದ ಆನಂದಿಗೆ ಈಗ ಸೊಸೆ ಕಾಟ ವಿಪರೀತ ಅಗೋತ್ಯ. ಆ ಸೊಸೆಯೂ ಓದು ಬರಹ ಕಲಿತವಳಲ್ಲ. ಆದರೂ ಯಾಕೋ ಒಂದಿಷ್ಟು ಕೊಬ್ಬು-ಸೊಕ್ಕು ತಾನು ಹೇಳಿದ ಹಾಗೆ ಎಲ್ಲರೂ ನಡಕಳೋ ಎಂಬ ಧಿಮಾಕು. ಆನಂದಿ ಹೈರಾಣಾಗಿ ಹೋದ್ಲು.

ಬಡವ್ರಿಗೆ ಮಕ್ಕಳ ಭಾಗ್ಯ ಜಾಸ್ತಿ ಹೇಳೋ ಮಾತಿದ್ದಲಿ ಹಾಂಗೆ ಆತು. ಆನಂದಿ ಸೊಸೆ ಬಸ್ರಿ ಆದ್ಲು. ಈಗ ಆನಂದಿ ಕೆಲ್ಸ ಇನ್ನೂ ಜಾಸ್ತಿ ಆತು. ಸೊಸೆಯ ಆರೋಗ್ಯದ ಭಾರವೂ ಇವಳ ಮೇಲೇ ಬಿತ್ತು. ಆನಂದಿಗೆ ಒಬ್ಬ ಮೊಮ್ಮಗನೂ ಬಂದ. ಇದು ಒಂದು ರೀತಿ ಖುಷಿ ತಂದರೂ ಆನಂದಿ ಒಳಗೊಳಗೇ ಬೇಯುತ್ತಿದ್ದಳು. ಕಾರಣ ಇಷ್ಟೇ ಸೊಸೆ ವರ್ತನೆ ಇನ್ನೂ ಕ್ರೂರ ಆಗಿತ್ತು. ಹುಟ್ಟಿದ ಮಗುವನ್ನು ಅತ್ತೆ ಎತ್ತು ಮುದ್ದಾಡಿಸಬಾರದೆಂಬ ಹಟ. ಅತ್ತೆ ಕೇವಲ ಕೆಲಸ ಮಾಡಿಕೊಂಡು ಬಿದ್ದಿರಿ ಹೇಳೋ ಮನಸ್ಥಿತಿ. ಆನಂದಿ ಸಂಸಾರ ಎಷ್ಟು ಕೆಟ್ಟೋತು ಅಂದ್ರೆ ಸೊಸೆ ಬೇರೆ ಮನೆ ಮಾಡುವಂತೆ ಗಂಡಂಗೆ ಪೀಡಿಸೋವಲ್ಲಿಗೆ ಹೋತು. ಆ ಗಂಡ ಮಹಾಶಯನೋ ಬೆಪ್ಪ ತಕ್ಕಡಿ. ಹೆಂಡ್ತಿ ಹೇಳ್ದಂಗೆ ಕೇಳಕಂಡಿ ಬಿದ್ದಿರ್ತಿದ್ದ. ಅಬ್ಬೆ ಅದೆಷ್ಟು ಕಷ್ಟ ಪಡ್ತಿದ್ಲು ಹೇಳೋ ಸ್ವಲ್ಪನೂ ಚಿಂತೆ ಅವಂಗಿದ್ದಿತ್ತಿಲ್ಲೆ, ಹೆಂಡ್ತಿ ಹೇಳ್ದಂಗೆ ಬೇರೆ ಮನೆನೂ ಮಾಡೇ ಬಿಟ್ಟ. ಹೋಗುವಾಗ ಮನೇಲಿದ್ದ ದಿನಬಳೆ ಸಾಮಾನನ್ನು ಹೊತ್ಕೊಂಡೆ ಹೋದ. ಹೆಂಡ್ತಿ-ಮಗನ ಕಟ್ಟಿಕೊಂಡು ಹೋಗೋ ಬಿಟ್ಟ.


ಇಲ್ಲಿ ಆನಂದಿ ಮಾತ್ರ ವಯಸ್ಸಾದ್ರೂ ಆಚೆ-ಈಚೆ ಮನೆ ಕೆಲಸ, ಅಡಿಕೆ ಸೊಲಿದು ಮತ್ತೇನಾದ್ರೂ ಪಡಚಾಕ್ರಿ ಮಾಡಿಕೊಂಡು ಒಂಟಿಯಾಗಿ ಹೊಟ್ಟೆ ತುಂಬುವಷ್ಟು ಅಲ್ಲದಿದ್ರೂ, ಜೀವ ಉಳಿಸ್ಕಂಬ್ಲೆ, ಅನ್ನ ಇಲ್ದಿದ್ರೂ ಗಂಜಿ ಕುಡಿಕೊಂಡು ಬದುಕುವಂತಾಯಿತು. ಹೊರಟು ಹೋದ ಸೊಸೆ ಮಾತ್ರ ಒಂದ್ಸಲನೂ ವಾಪಸ್ ಬಂಜ್ಜೆಲ್ಗೆ. ಮಗ ಮಾತ್ರ ಹೆಂಡತಿ ಮಾತಿ ಕೇಳ್ಕಂಡಿ, ಅಬ್ಬೆ ಹತ್ರ ದುಡ್ಡು ವಸೂಲಿ ಮಾಡೂಲೆ ಬತ್ತಿದ್ದ. ಪಾಪ! ಅಬ್ಬೆ ಎಲ್ಲಿಂದ ದುಡ್ ತಪ್ಲಾಗ್ತು? ಕೊರಗಿ ಕೊರಗಿ ಎಲ್ಲು ಚರ್ಮಮಾತ್ರ ಕಾಣ್ತಿತ್ತು.

ಹೆಸರೇನೋ ಆನಂದಿ. ಆದ್ರೆ ಒಂದಿವ್ಸನೂ ಅವಳು ಆನಂದದಲ್ಲಿ ಇದ್ದದ್ದನ್ನು ಕಂಡವ್ರೇ ಇಲ್ಲೇ; ಕೇಳದವ್ರೂ ಇಲ್ಲೆ.

PAGE DONATED BY : **SHRI V. G. BHAT, NIGDI**

# ಶಕಪುರುಷನ ಸಂಸ್ಮರಣೆ

✍ ಡಾ. ಜಿ.ಎನ್. ಉಪಾಧ್ಯ, ಮುಂಬೈ




ಕೃತಿ : ಸೂರಿ ಪರ್ವ

ಲೇಖಕರು : ಶಶಿಕಲಾ ಹೆಗಡೆ (9869015917)

ಪ್ರಕಾಶನ : ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ ವಿದ್ಯಾನಗರಿ, ಮುಂಬಯಿ - 400 098.

ಬೆಲೆ : ರೂ. 150/-

ವರ್ಷ : 2022

ಹೊಸಗನ್ನಡ ಸಾಹಿತ್ಯದ ಆದ್ಯ ಪುರುಷರಲ್ಲಿ ಕರ್ಕಿ ವೆಂಕಟರಮಣ ಶಾಸ್ತ್ರಿ ಅವರದು ಎದ್ದು ಕಾಣುವ ಹೆಸರು. ಅವರದು ಬಹುಮುಖ ಪ್ರತಿಭೆ ಹಾಗೂ ನಾನಾ ಮುಖಗಳ ವ್ಯಕ್ತಿತ್ವ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಮುಂಬೈಯಲ್ಲಿ ನೆಲೆಸಿ ಕನ್ನಡದ ಸರ್ವತೋಮುಖ ಅಭಿವೃದ್ಧಿಗೆ ತನುಶುದ್ಧ ಮನಶುದ್ಧ ಭಾವಶುದ್ಧವಾಗಿ ಶ್ರಮಿಸಿದ ಧೀಮಂತ ಚೇತನ ಕ. ವೆಂ. ಶಾಸ್ತ್ರಿ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವರ ಜೀವನ ಸಾಧನೆ ಸರಿಯಾಗಿ ದಾಖಲಾಗಿಲ್ಲ. ಕನ್ನಡ ಗ್ರಂಥ ಸಂಪಾದನ ಕ್ಷೇತ್ರದ ಈ ಮೇರು ಪ್ರತಿಭೆಯ ಹೆಸರು ಸಾಹಿತ್ಯ ಸಂಶೋಧನೆಯ ಕೃತಿಗಳಲ್ಲಿ ಕಾಣ ಸಿಗದಿರುವುದು ಸಖೇದಾಶ್ಚರ್ಯ. ಮುಂಬೈಯನ್ನು ಕನ್ನಡದ ಶಕ್ತಿ ಕೇಂದ್ರವನ್ನಾಗಿ ಮಾಡಿದ ಶ್ರೇಯಸ್ಸು ಕರ್ಕಿ ಅವರಿಗೆ ಸಲ್ಲುತ್ತದೆ. ಅವರ ಸಮಗ್ರ ವ್ಯಕ್ತಿತ್ವ. ಸಾಹಿತ್ಯ ಪರಿಚಾರಿಕೆ, ಕನ್ನಡ ಕೈಂಕರ್ಯಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ಉತ್ತಮ ಕೃತಿಯೊಂದನ್ನು ರಚಿಸಿದ ಹಿರಿಮೆ ಶಶಿಕಲಾ ಹೆಗಡೆ ಅವರಿಗೆ ಸಲ್ಲುತ್ತದೆ.

ಹೊಸಗನ್ನಡ ಸಾಹಿತ್ಯ ಚರಿತ್ರೆಯನ್ನು ಸಮಗ್ರವಾಗಿ ಸಮರ್ಪಕವಾಗಿ ಕಟ್ಟಿಕೊಡುವ ಕೆಲಸ ಇನ್ನೂ ನಡೆದಿಲ್ಲ. ಹೀಗಾಗಿ ಪ್ರಸ್ತುತ ಕೃತಿ ಸಾಹಿತ್ಯ ಚರಿತ್ರೆಯ ರಚನೆಯ ಒಂದು ವಿಶೇಷವಾದ ಪ್ರಯತ್ನ ಎಂದೂ ನೋಡಬಹುದಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಗೆ ಪೂರಕವಾದ ವಿಚಾರ ವಿಮರ್ಶೆಯೂ ಈ ಕೃತಿಯಲ್ಲಿ ನೆಲೆ ಪಡೆದಿರುವುದು ಉಲ್ಲೇಖನೀಯ ಅಂಶ. ಹೊರನಾಡಾದ ಮುಂಬೈಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಸಮೃದ್ಧಗೊಳಿಸಿದ ಕರ್ಕಿ ವೆಂಕಟರಮಣ ಶಾಸ್ತ್ರಿ ಅವರ ಕುರಿತು ಈವರೆಗೆ ಯಾವುದೇ ಅಧ್ಯಯನಪೂರ್ಣ ಕೃತಿ ಬೆಳಕು ಕಂಡಿಲ್ಲ. ಈ ಕೊರತೆಯನ್ನು ತುಂಬಿಕೊಟ್ಟು ಒಳ್ಳೆಯ ಆಕರ ಗ್ರಂಥವನ್ನು ರಚಿಸಿದ ಶ್ರೇಯಸ್ಸು ಶಶಿಕಲಾ ಹೆಗಡೆ ಅವರಿಗೆ ಸಲ್ಲುತ್ತದೆ.

ಇಪ್ಪತ್ತನೆಯ ಶತಮಾನ ಕನ್ನಡ ಸಾಹಿತ್ಯದ ಮತ್ತೊಂದು ಸುವರ್ಣಯುಗ. ಹೊಸಗನ್ನಡ ಸಾಹಿತ್ಯ ಧಾರವಾಡ, ಮೈಸೂರು, ಮಂಗಳೂರು ಹಾಗೂ ಮುಂಬೈ ವಲಯಗಳಲ್ಲಿ ಏಕಕಾಲಕ್ಕೆ ಬೆಳವಣಿಗೆಯನ್ನು ಕಂಡಿತು. ಆಧುನಿಕ ಕನ್ನಡ ವಾಙ್ಮಯವನ್ನು ಅಧ್ಯಯನ ಮಾಡುವಾಗ ವಿದ್ವಾಂಸರು, ವಿಮರ್ಶಕರು, ಇತಿಹಾಸಕಾರರು ಮತ್ತೆಮತ್ತೆ ಮುಂಬೈ ಕಡೆ ಮುಖ ಮಾಡಬೇಕಾಗುತ್ತದೆ. ಕಾಳಿದಾಸನ 'ಶಾಕುಂತಲ' ನಾಟಕವನ್ನು ಮೊತ್ತ ಮೊದಲು ಅನುವಾದಿಸಿ (1869) ಪ್ರಕಟಿಸಿದ ಕೀರ್ತಿ ಮುಂಬೈ ಕನ್ನಡಿಗ ಚುರಮುರಿ ಶೇಷಗಿರಿರಾಯರಿಗೆ ಸಲ್ಲುತ್ತದೆ. ಈ ಮಹಾನಗರದಲ್ಲಿ ಧೀರ ಪತ್ರಿಕೋದ್ಯಮಿಯಾಗಿ ಕೆಲಸ ಮಾಡಿದ ಕರ್ಕಿ ವೆಂಕಟರಮಣ ಶಾಸ್ತ್ರಿ ಅವರು ಕನ್ನಡದ ಮೊದಲ ಸಾಮಾಜಿಕ ನಾಟಕ 'ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ ಅಥವಾ ಕನ್ಯಾ ವಿಕ್ರಯದ ಪರಿಣಾಮವು' ಕೃತಿ ರಚಿಸಿ ಹೊಸ ಮನ್ವಂತರಕ್ಕೆ ನಾಂದಿ ಹಾಡಿದರು.

ಕರ್ಕಿ ವೆಂಕಟರಮಣ ಶಾಸ್ತ್ರಿಗಳು ಬರೇ ಪತ್ರಿಕೋದ್ಯಮವನ್ನು ನಡೆಸಿದವರಲ್ಲ. ಜೊತೆಗೆ ಹಲವಾರು ಕೃತಿಗಳನ್ನು ಪ್ರಕಟಿಸಿದರು. ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ ಅಥವಾ ಕನ್ಯಾ ವಿಕ್ರಯ ಪರಿಣಾಮವು (1887), ಕನ್ನಡ ಬೃಹತ್ ಸ್ತೋತ್ರ ರತ್ನಾಕರ (1887), ದಕ್ಷಿಣ ಯಾತ್ರಾ ಚರಿತ್ರೆ (1881), ಪ್ರಾಚೀನ ನಾಟ್ಯಕಥಾರ್ಣವ (1888), ರತಿ ಕಲ್ಯಾಣ, ಕೌಂಡಲನ ವಧೆ (1886). ಕಾರ್ತವೀರ್ಯಾರ್ಜುನ ವಧೆ, ತುರಂಗ ಭಾರತ, ದುರ್ಗಾ ಸಪ್ತಶತಿ, ವೆಂಕಟೇಶಿಯ ಪ್ರಯೋಗ ಮೊದಲಾದ ಪುಸ್ತಕಗಳನ್ನು ಬರೆದು ಪ್ರಕಟಿಸಿದರು. ಕೆಲವನ್ನು ಸಂಪಾದಿಸಿದರು. ಕೆಲವು ಕಡೆ ತಮ್ಮ ಹೆಸರನ್ನು ಗುಪ್ತವಾಗಿಟ್ಟು ಬರೆದರು. ಪುಸ್ತಕ ಪ್ರಕಟಣೆ, ಪತ್ರಿಕೋದ್ಯಮ ಅಂದು ಇವತ್ತಿನಷ್ಟು ಸುಲಭವಾಗಿರಲಿಲ್ಲ. ಅದರಲ್ಲೂ ಮುಂಬಯಿಯಲ್ಲಿ ನೂರು ವ ರ್ಷದ ಹಿಂದೆ ಪತ್ರಿಕೋದ್ಯಮ, ಪುಸ್ತಕ ಪ್ರಕಟಣೆಯನ್ನು ಯಶಸ್ವಿಯಾಗಿ ನಡೆಸಿದ ವೆಂಕಟರಮಣ ಶಾಸ್ತ್ರಿಗಳ ಸಾಹಸ, ಧೈರ್ಯ ಯಾರನ್ನೂ ದಂಗುಬಡಿಸುತ್ತದೆ. ಶಾಸ್ತ್ರಿ ಅವರ ಕೊನೆಯ ದಿನಗಳು ಅಷ್ಟು ಸುಖಕರವಾಗಿದ್ದಂತೆ ಕಾಣುವುದಿಲ್ಲ. ಮುಂಬಯಿಯಲ್ಲಿ ಭಾರತಿ ಛಾಪಖಾನೆ ಮುಚ್ಚಿಹೋದ ಬಳಿಕ ಕೆಲ ಕಾಲ ಅವರು ಪುಣೆಯಲ್ಲಿ ವೈದ್ಯವೃತ್ತಿ ನಡೆಸಿದರಂತೆ. ಅಲ್ಲಿಯೂ ಸರಿಯಾಗದೆ ಹುಟ್ಟೂರಿಗೆ ಹೋಗಿ ನೆಲೆಸಿದರು ಎನ್ನಲಾಗಿದೆ. ಸೂರಿ ವೆಂಕಟರಮಣ ಶಾಸ್ತ್ರಿಗಳು ಕನ್ನಡಕ್ಕೆ ಕೊಟ್ಟ ಮಹತ್ವದ ಕಾಣಿಕೆ ಎಂದರೆ 'ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ' ನಾಟಕ. ಇದು ಕನ್ನಡದ ಮೊದಲ ಸಾಮಾಜಿಕ ನಾಟಕ ಎಂಬ ಕೀರ್ತಿಗೂ ಪಾತ್ರವಾಗಿದೆ. 32 ಪುಟಗಳ ಕಿರು ನಾಟಕವಿದು. ಇಗ್ಗಪ್ಪ ಹೆಗಡೇ ಈ ನಾಟಕದ ಕೇಂದ್ರ ಬಿಂದು. ಅವನು ಮಾಡಿಕೊಂಡ ಮದುವೆಯೇ ಈ ನಾಟಕದ ವಿಷಯ ವಸ್ತು. ಇಗ್ಗಪ್ಪ ಹೆಗಡೇ ಬದುಕಿನ ಸುತ್ತ ಈ ನಾಟಕ ಬೆಳೆದರೂ ಅದು ವೈಯಕ್ತಿಕವಾಗದೇ ಸಾರ್ವತ್ರಿಕವಾಗುವುದು ಈ ನಾಟಕದ ವೈಶಿಷ್ಟ್ಯ.

ಪತ್ರಿಕೋದ್ಯಮ, ಮುದ್ರಣ ಕಾರ್ಯ, ಸಾಹಿತ್ಯ, ಗ್ರಂಥ ಸಂಪಾದನೆ ಮೊದಲಾದುವುಗಳನ್ನು ತಮ್ಮ ಕಾರ್ಯಕ್ಷೇತ್ರಗಳನ್ನಾಗಿ ಮಾಡಿಕೊಂಡು ಕನ್ನಡದ ಏಳಿಗೆಗೆ ಗಂಧದ ಕೊರಡಿನಂತೆ ತೇದಿಕೊಂಡ ಕ. ವೆಂ. ಶಾಸ್ತ್ರಿ ಅವರ ಸೇವೆ ಅಚಂದ್ರಾರ್ಕವಾದುದು ಎಂಬುದನ್ನು ಪ್ರಸ್ತುತ ಕೃತಿಯಲ್ಲಿ ಶಶಿಕಲಾ ಹೆಗಡೆ ಅವರು ಚೆನ್ನಾಗಿ ಅನಾವರಣಗೊಳಿಸಿದ್ದಾರೆ. ಕರ್ಕಿ ಅವರು ಬರೇ ಆದ್ಯ ಸಾಮಾಜಿಕ ನಾಟಕಕಾರರಷ್ಟೇ ಅಲ್ಲ, ಅವರೊಬ್ಬ ಘನ ವಿದ್ವಾಂಸ. ಸಾಹಸಿ ಮುದ್ರಣಕಾರ, ಧೀರ ಪತ್ರಿಕೋದ್ಯಮಿ, ಕ್ರಾಂತಿಕಾರಿ ಸಾಧಕ, ಶಕಪುರುಷ, ತಮ್ಮ ನಿರಂತರ ಪರಿಶ್ರಮ, ನಿಚ್ಚಳ ವಿವೇಕದಿಂದ ಕನ್ನಡಿಗರ ಹಿತಕಾದ ಆದರ್ಶ ವ್ಯಕ್ತಿ ಎಂಬುದನ್ನು ಇಲ್ಲಿ ಮುನ್ನಲೆಗೆ ತಂದು ಚರ್ಚಿಸಿರುವುದು ಗಮನೀಯ ಅಂಶ. ಕನ್ನಡ ನಾಡಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ಜಗತ್ತಿನಲ್ಲಿ ಕರ್ಕಿ ಅವರಿಗೆ ಯಾವತ್ತೂ ಗಣ್ಯಸ್ಥಾನ ಇದ್ದೇ ಇದೆ ಎಂಬುದನ್ನು ಈ ಕೃತಿಯಲ್ಲಿ ಶಶಿಕಲಾ ಅವರು ರುಜುವಾತು ಪಡಿಸಿದ್ದಾರೆ. ಕರ್ಕಿ ವಿರಚಿತ ನಾಟಕದ ಪಠ್ಯವನ್ನು ಯಥಾವತ್ತಾಗಿ ಕೊಟ್ಟಿರುವುದಲ್ಲದೇ ಕೆಲವು ಅಪೂರ್ವ ವ್ಯಂಗ್ಯಚಿತ್ರಗಳನ್ನು ಆಯ್ದು ದಾಖಲಿಸಿರುವುದರಿಂದ ಪ್ರಸ್ತುತ ಕೃತಿಯ ಹಿರಿಮೆ ಮತ್ತಷ್ಟು ಹೆಚ್ಚಿದೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಭಾಗವಾಗಿಯೇ ನಾವು ಈ ಕೃತಿಯನ್ನು ಓದಿಕೊಳ್ಳಬೇಕಾಗಿದೆ. ಶಶಿಕಲಾ ಹೆಗಡೆ ಅವರು ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಹೆಮ್ಮೆಯ ಪ್ರತಿಭಾವಂತ ವಿದ್ಯಾರ್ಥಿ. ಕನ್ನಡ ಸಾಹಿತ್ಯಕ್ಕೆ ಇದೊಂದು ಒಳ್ಳೆಯ ಸೇರ್ಪಡೆ. ಶಕ ಪುರುಷ ಕರ್ಕಿ ಅವರ ಆದರ್ಶ ವ್ಯಕ್ತಿತ್ವ, ಕನ್ನಡ ಪರಿಚಾರಿಕೆ, ಜೀವನ ಸಾಧನೆ ಸಮಗ್ರವಾಗಿ ದಾಖಲಾಗಿರುವುದು ಈ ಕೃತಿಯ ವಿಶೇಷ. ಶಶಿಕಲಾ ಅವರ ಶ್ರಮ ಸಾರ್ಥಕ. ಅವರಿಗೆ ಹಾರ್ದಿಕ ಅಭಿನಂದನೆಗಳು.

*PAGE DONATED BY : **SMT. KALA BHAGWAT,** KHARGAR **IN MEMORY OF MOTHER LATE SMT. GOURI BHAT***

# Home Coming

✍ L. V. Shastri, Bangalore



'Be it ever so humble there is no place like home' is a well known line from a poem that was set to music in early 19th century. The line speaks volumes, taking one down the memory lane from birth onwards.

The first home coming is, of course, when a baby comes out from mother's womb and into the world, crying and bringing smile to mother. To quote Dr Abdul Kalam, 'Birthday is the only day in your life…..Your mother smiled when you cried'. The newborn has come from 'somewhere'. The second home coming, philosophically speaking, is when the grown up leaves this world for good and goes 'somewhere'.

The great saga of living is played out between the two home comings. Finding answers to wherefrom and whereto, respectively, for the two 'somewhere' forms the stuff of philosophies, religions and also scientific studies to an extent.

Leaving nomads from the present discussion, we may reflect as to what makes home a unique place on earth despite being humble. It would be the deep rooted sentiments about the place of the first ever home coming. The newborn starts growing up in an atmosphere of unparalleled warmth, affection and love showered, unconditionally, by the mother and other members in the family. This 'first impression' remains ever etched in one's psyche.

In Hindu philosophy, the two home comings are regarded as denoting the journey of the soul, jeevatma. Great emphasis is given for an individual to make the journey pleasurable and meaningful, with an ideal agenda that jeevatma, by actions and deeds performed herein, goes home to mingle with paramatma, the universal soul, and overcomes the cycles of rebirth.

Taking up deeds and actions would require that the physical body is kept in healthy and strong condition. Accordingly, due emphasis was given on maintaining good health even from the days of the Vedas that originated millennia ago. Such an emphasis is contained in the 'shanti mantras' that one would recite before starting any auspicious work. As an example, in the 'shanti mantra' of Mundaka Upanishad (Atharva Veda), one prays thus :

'Let us hear what is good, see what is good, let us live through the span of life that is given to us with healthy limbs and strong body and live in ways that would be pleasing to the Gods ------ let us thus seek peace, peace and peace (shanti)'. Of course, the emphasis on good health and also peace of mind continues today, as ever before.

Regarding the quality of the home one enters, the concept of karma is put forward. The quality would be decided by the actions and deeds performed in the previous births. By engaging oneself in good deeds one can earn a good quality of home in the next birth or can achieve the pinnacle of escaping from birth cycles altogether. Bad deeds would beget the opposite, sending one to a home that is very unpleasant. Many would be well aware of such beliefs.

Birth and death are the two realities over which no one can have full control. However, the occasion when jeevatma leaves the body for good – death of an individual - brings inconsolable sorrow to family members and friends. The simplest and most convincing words of consolation for such occasions have come from Lord Krishna himself in the Gita. 'Just as one discards old clothes and wears new ones, jeevatma would leave one body and take up a new one' (Gita: 2, 22).

The ancient vedic system had introduced one more home coming in between the above two home comings. One would enter vanaprasha phase of life span in later years. One would take leave for all family obligations after middle age to spend the evening of lifespan away from home, in remote locations. The new abode for him was called 'vanaprasthashram'. This migration was expected to help one in spending the time peacefully in activities like meditation and other spiritual exercises. The word 'ashram' suggests that the second home would be humble in its credentials.

At present times, an issue that holds considerable social implications, especially in Indian context, is homeland vs foreign land. It has to be said at the outset that home land would imply not just the land of birth but also shared culture and value system that has existed for centuries. However, many youngsters who get educated in specialist fields in India move to foreign lands to showcase their talent and earn much better remunerations. Overtime, they get adjusted to the cultural differences, raise family and eventually settle down there. Even so, they may feel the compulsion to visit their homeland once a while, albeit for short duration. Parents face the difficult task of fending for themselves in their old age. Blissfully, the situation is changing now with better opportunities opening up in India for specialist jobs. Also, the problem of isolation faced by aging parents is being remedied greatly by offering them another homecoming in the form of 'old age homes' that provide the much needed assisted living. These homes are like the olden ashrams in their new avatar!

It would not be a far fetched imagination to think that those who moved to 'ashrams' as their home in ancient days or to old age homes at present times would say gleefully: 'Oh! Be it ever so humble there is no place like home'!

*PAGE DONATED BY :* ***SHRI CHIDANANDA BHAGWAT IN MEMORY OF HIS FATHER LATE KRISHNA T. BHAGWAT***

## HAVYAKA

**32nd Annual Satyanarayana Pooja & Get-together**

**Date: 6th Nov 2022**

**Venue:**
**Sarvesh Mangal Karyalaya, Tilak Rd., Dombivili East**

**Timing: 9 am to 5 pm**

**ATTEND, PARTICIPATE, ENJOY & RETAIN THE MEMORIES**

All Havyakas are requested to attend the function with their family and friends to make this occasion a grand success

### Donation List HWT

| | | | |
|---|---|---|---|
| 1. | M.S.Hebbar | Rs. | 5001 |
| 2. | Raghuveer H. S. | Rs. | 5000 |
| 2. | R. A. Hegde | Rs. | 10000 |
| 3. | M. C. Rao | Rs. | 5000 |
| 4. | Rajaram Hegde | Rs. | 501 |
| 5. | Gautam Upadhya | Rs. | 1500 |
| 6. | Chetana Upadhya | Rs. | 1000 |
| 7. | R. N. Kameshwar | Rs. | 1000 |
| 8. | Saroja Hegde | Rs. | 1000 |
| 9. | K. C. Hegde | Rs. | 1200 |
| 10. | Sreeniwas Rao | Rs. | 501 |
| 11. | S. N. Pandit | Rs. | 2001 |
| 12. | Amita Bhagwat | Rs. | 2100 |
| | (W.W.C) | | |
| 13. | Advait Vaidaya | Rs. | 5000 |

*With the Blessings of*

**Shrimajjagadguru Shankaracharya Mahasamsthanam Shrisamsthana Gokarna,**
**Shri Shri Raghaveshwara Bharati Mahaswamiji**
**Mumbai Valaya and Dombivali Valaya**

*Organizing 16th*

## BLOOD DONATION CAMP - 2022

*Venue : Club House Raheja Gardens, Near Teen Hath Naka, Thane*
*Date : 13/11/2022, Timing : 8:00 am to 2 : 00 pm*

*For more details contact*

**ISHWARI BHAT - 9158064444, M. N. MARKANDE - 9833615085**
**VISHNU BHAGWAT - 9819798245**
**U. T. K. MURTHY - 9158018555, R. N. KAMESHWAR - 8779685243**
**DR. KUMAR BHAT - 8928689728**

**Requesting everyone to donate blood & save life.**

# ಸಂಕ್ಷಿಪ್ತ ಸುದ್ದಿಗಳು

## ವಾರ್ಷಿಕ ದುರ್ಗಾಪೂಜೆ

ಹವ್ಯಕ ವೆಲ್ಫೇರ್ ಟ್ರಸ್ಟ್ ಮುಂಬಯಿ, ನವರಾತ್ರಿ ಮಹೋತ್ಸವದ ಅಂಗವಾಗಿ ವಾರ್ಷಿಕ ದುರ್ಗಾಪೂಜೆಯನ್ನು ಘಾಟ್ಕೋಪರ್‌ನ ಹವ್ಯಕರ ಸಭಾಗೃಹದಲ್ಲಿ ಅಕ್ಟೋಬರ್ 2ರಂದು ಆಯೋಜಿಸಿತ್ತು. ಶ್ರೀ ಗೋಪಾಲ ಗಾಯತ್ರಿ ಅವರ ಪೌರೋಹಿತ್ಯದಲ್ಲಿ ಶ್ರೀಮತಿ ರಂಜನಾ ಹಾಗೂ ಶ್ರೀ ತೇಜಸ್ ಹೆಗಡೆ ದಂಪತಿ ಸಂಕಲ್ಪವನ್ನು ಕೈಗೊಂಡು ಶಾಸ್ತ್ರೋಕ್ತವಾಗಿ ಪೂಜೆಯನ್ನು ನೆರವೇರಿಸಿದರು. ವಿವಿಧ ಹೂಗಳಿಂದ ಅಲಂಕೃತಗೊಂಡ ದೇವಿಮಾತೆಯನ್ನು ಲಲಿತಾ ಸಹಸ್ರನಾಮ ಹಾಗೂ ಕುಂಕುಮಾರ್ಚನೆಯ ಮೂಲಕ ಅರ್ಚಿಸಲಾಯಿತು. ಡೊಂಬಿವಲಿಯ ಹವ್ಯಕ ಭಜನಾಮಂಡಳಿಯ ಸದಸ್ಯರು ಮತ್ತು ನೆರೆದ ಭಕ್ತ ವೃಂದದವರು ಭಜನೆಯನ್ನು ಹಾಡಿದರು. ದೇವಿಯ ಸ್ತುತಿ, ಸ್ತೋತ್ರ, ಜಯಘೋಷಗಳೊಂದಿಗೆ ಮಹಾ ಮಂಗಳಾರತಿಯನ್ನು ಮಾಡಲಾಯಿತು. ಹೆಂಗಳೆಯರಿಗೆ ಅರಿಶಿನ, ಕುಂಕುಮ, ಫಲ, ಪುಷ್ಪಗಳನ್ನು ನೀಡಲಾಯಿತು. ನೈವೇದ್ಯ ಪ್ರಸಾದ ಪಂಚಕಜ್ಜಾಯ, ಕೋಸಂಬರಿ, ಪಾನಕಗಳನ್ನು ಎಲ್ಲರಿಗೂ ವಿತರಿಸಲಾಯಿತು. ಆ ದಿನದ ವಿಶೇಷ ಕಾರ್ಯಕ್ರಮವಾದ ಹಿರಿಯ ಹವ್ಯಕ ಮಹನೀಯರಿಗೆ ನೀಡಲಾಗುವ 'ಗೌರವ ಸಮರ್ಪಣೆ' ಯಶಸ್ವಿಯಾಗಿ ನೆರವೇರಿತು.

ಮುಂಬಯಿಯ ಹವ್ಯಕ ಸಂಸ್ಥೆಯನ್ನು ಕಟ್ಟಿ ಬೆಳೆಸುವುದರಲ್ಲಿ ತಮ್ಮ ಯೋಗದಾನವನ್ನು ನೀಡಿದ ಹಿರಿಯ ಹವ್ಯಕ ಸದಸ್ಯರನ್ನು ಗುರುತಿಸಿ ಸನ್ಮಾನಿಸುವ ಕಾರ್ಯಕ್ರಮವನ್ನು ಕಳೆದ ಕೆಲ ವರ್ಷಗಳಿಂದ ನಡೆದುಕೊಂಡು ಬರಲಾಗುತ್ತಿದೆ. ಈ ವರ್ಷ ಶ್ರೀ ಎಸ್. ಎನ್. ಪಂಡಿತ್, ಶ್ರೀ ಸಚ್ಚಿದಾನಂದ ಹೆಬ್ಬಾರ್, ಶ್ರೀ ಕೃಷ್ಣಯ್ಯ ಭಟ್, ಶ್ರೀ ಜಿ. ಎನ್. ಹೆಗಡೆ ಹಾಗೂ ಶ್ರೀ ಎಮ್. ಸಿ. ರಾವ್ ಇವರನ್ನು ಶ್ರೀಫಲ, ಪುಷ್ಪಗಳನ್ನಿತ್ತು ಗೌರವಿಸಲಾಯಿತು. ಸನ್ಮಾನಿತರಾದ ಗಣ್ಯರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು ಜೊತೆಗೆ ಹವ್ಯಕ ವೆಲ್ಫೇರ್ ಟ್ರಸ್ಟ್ ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಹೊಂದಲೆಂದು ಹಾರೈಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಪತ್ರ ಹಾಗೂ ಸ್ಕಾಲರ್ ಶಿಪ್ ವಿತರಣಾ ಕಾರ್ಯಕ್ರಮ ಕೂಡ ನಡೆಯಿತು. ಶುಚಿರುಚಿಯಾದ ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

## Meritorious Students felicitated during durga pooja

**10th Std.**

1) Kumari Lavanya Suresh Upadhya
2) Kumari Niyati Vinod Bhat
3) Kumari Siri Mahabaleshwar Kameshwar
4) Kumar Prashant Ganapati Hegde
5) Kumari Dravya Nobin Hegde
6) Kumar Ashish Chidanand Bhagwat
7) Kumar Aarya Gururaj Hebbar
8) Kumari Navya Ganapati Joshi
9) Kumar Sriharsh Praveenchandra Rao

**12th**

1) Kumar Sudeep Arunkumar Joshi
2) Kumari Vedashree R. Joshi
3) Kumari Nidhi Vasant Bhat
4) Kumari Shravya Nagaraj Kanalli

**Graduation /Post Graduation /Engineering /Medicine/CA/CS**

1) Kumari Shraddha Umesh Bhat
2) Kumar Akash Chandrakant Shitut
3) Kumari Reshma Umesh Bhat
4) Smt. Kala Chidanand Bhagwat
5) Smt Shashikala Rokesh Hegde
6) Kumari Gayatri Shridhar Hegde
7) Kumar Raghuveer H. S.
8) Kumar Advait Ramesh Vaidya
9) Kumar Akshay Ganesh Bhat
10) Kumari Sushma Govind Hegde
11) Kumari Namrata Balakrishna Bhat
12) Kumar Niranjan Shridhar Hegde
13) Kumari Meghana Divaspati Hegde
14) Kumari Kavita Jagadish Hegde
15) Kumar Anantha Subray Hegde
16) Kumari Vibha R. Joshi

## "ಸೂರಿ ಪರ್ವ – ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯವರ ಜೀವನ ಸಾಧನೆ" ಕೃತಿ ಬಿಡುಗಡೆ

### ಸೂರಿ ಪರ್ವ ಕನ್ನಡದ ಹಿರಿಮೆ – ಡಾ. ಜಿ. ಎಲ್. ಹೆಗಡೆ

ಕನ್ನಡ ವಿಭಾಗ, ಮುಂಬೈ ವಿಶ್ವವಿದ್ಯಾಲಯ ಹಾಗೂ ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ ಇದರ ಜಂಟಿ ಆಶ್ರಯದಲ್ಲಿ ಅಕ್ಟೋಬರ್ 8ರಂದು ಘಾಟ್ಕೋಪರಿನ ಹವ್ಯಕರ ಸಭಾಗೃಹದಲ್ಲಿ ನಡೆದ "ಸೂರಿ ಪರ್ವ-ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯವರ ಜೀವನ ಸಾಧನೆ" ಕೃತಿ ಬಿಡುಗಡೆ ಕಾರ್ಯಕ್ರಮದ ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡಿದ ಡಾ. ಜಿ. ಎಲ್. ಹೆಗಡೆಯವರು "ಮಾಯಾನಗರಿ ಮುಂಬಯಿ ಕೇವಲ ಹಣ ಗಳಿಕೆಯ ಕೇಂದ್ರವಾಗಿರದೆ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳ ನೆಲೆಯಾಗಿದೆ. ಸೂರಿ ಶಾಸ್ತ್ರಿಯವರು ಮುಂಬಯಿ ನೆಲದಲ್ಲಿ ಕನ್ನಡವನ್ನು ಕಟ್ಟುವ ಕೆಲಸ ಮಾಡಿದವರು.ಅವರ ಗ್ರಂಥ ಸಂಪಾದನೆಯ ಕಾರ್ಯದಲ್ಲಿ ಅನೇಕ ಯಕ್ಷಗಾನ ಪ್ರಸಂಗಗಳ ಸಂಪಾದನೆಯೂ ಸೇರಿದೆ. ಯಕ್ಷಗಾನ

*PAGE DONATED BY :* ***SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT***

ಕ್ಷೇತ್ರಕ್ಕೆ, ಕನ್ನಡ ಕಲಾಕ್ಷೇತ್ರಕ್ಕೆ ಹಾಗೂ ಸಾಹಿತ್ಯಕ್ಕೆ ಉತ್ತರ ಕನ್ನಡದವರ ಕೊಡುಗೆ ಮಹತ್ವದ್ದಾಗಿದೆ" ಎಂದು ಅವರು ನುಡಿದರು. ಜಿ. ಎಲ್. ಹೆಗಡೆಯವರು ಮುಂದೆ ಮಾತನಾಡುತ್ತಾ "ಎಲ್ಲರನ್ನೂ ಪ್ರೀತಿಸುವ ಗುಣ ಉಪಾಧ್ಯರಲ್ಲಿದೆ. ಅವರ ಮಾರ್ಗದರ್ಶನದ ಫಲವಾಗಿ ಸೂರಿ ಪರ್ವ ಕೃತಿ ಮೂಡಿ ಬಂದಿದೆ. ಪರ್ವ ಅಂದರೆ ಹಬ್ಬ. ಸೂರಿ ಎಂದರೆ ಸೂರ್ಯ. ಸೂರ್ಯಸಂತಹ ಸೂರಿ ಶಾಸ್ತ್ರಿಯವರ ಹೆಸರಿನ ಹಬ್ಬ ಇದಾಗಿದೆ. ಈ ಕೃತಿ ಲೋಕಾರ್ಪಣೆಗೊಂಡಿರುವುದು ಕನ್ನಡದ ಹಿರಿಮೆ" ಡಾ. ಜಿ. ಎಲ್. ಹೆಗಡೆ ಎಂದು ಮೆಚ್ಚುಗೆಯನ್ನು ವ್ಯಕ್ತ ಪಡಿಸಿದರು.

ಕನ್ನಡ ವಿಭಾಗ, ಮುಂಬೈ ವಿಶ್ವ ವಿದ್ಯಾಲಯದ ವಿದ್ಯಾರ್ಥಿ ಶಶಿಕಲಾ ಹೆಗಡೆಯವರು ಎಂ, ಎ. ಅಧ್ಯಯನದ ಸಂದರ್ಭದಲ್ಲಿ ಸಿದ್ಧಪಡಿಸಿದ ಸಂಪ್ರಬಂಧ "ಸೂರಿ ಪರ್ವ" ಕೃತಿ ರೂಪದಲ್ಲಿ ಹೊರಬಂದ ಈ ಸಂದರ್ಭದಲ್ಲಿ, ಕೃತಿ ಬಿಡುಗಡೆ ಮಾಡಿದ ಕನ್ನಡ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು ಆದ ಡಾ. ಜಿ. ಎನ್. ಉಪಾಧ್ಯ ಅವರು "19ನೆಯ ಶತಮಾನದ ಉತ್ತರಾರ್ಧದಲ್ಲಿ ಕನ್ನಡ ಸಂದಿಗ್ಧ ಕಾಲಘಟ್ಟದಲ್ಲಿ ಇದ್ದ ಸಂದರ್ಭದಲ್ಲಿ ಕನ್ನಡಕ್ಕಾಗಿ ಹೋರಾಡಿದ ಧೀಮಂತ ಚೇತನ ಕರ್ಕಿ ವೆಂಕಟರಮಣ ಶಾಸ್ತ್ರಿಯವರು. ಅವರ ಸಾಂಸ್ಕೃತಿಕ ಪರಿಚಾರಿಕೆ ಅತ್ಯಂತ ಮಹತ್ವದ್ದು " ಎಂದು ಸೂರಿಯವರ ಕುರಿತು ಅಭಿಮಾನದ ನುಡಿಗಳನ್ನಾಡಿದರು. ಉಪಾಧ್ಯ ಅವರು ಸೂರಿ ಶಾಸ್ತ್ರಿಯವರ ಗ್ರಂಥ ಸಂಪಾದನಾ ಸಾಹಸದ ಬಗೆಗೆ ವಿವರಿಸುತ್ತ ಕರ್ಕಿಯವರು ಸಂಪಾದಿಸಿದ 'ತುರಂಗ ಭಾರತ' ಮತ್ತು 'ಶಂಕರ ಸಂಹಿತೆ' ಗ್ರಂಥಗಳ ವಿಶೇಷತೆಗಳನ್ನು ಉಲ್ಲೇಖಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹವ್ಯಕ ವೆಲ್ಫೇರ್ ಟ್ರಸ್ಟಿನ ಅಧ್ಯಕ್ಷರು, ನ್ಯಾಯವಾದಿ ಶಿವಕುಮಾರ್ ಭಾಗವತ್ ಅವರು ಸೂರಿ ಪರ್ವ ಕೃತಿ ಲೋಕಾರ್ಪಣೆಗೊಂಡದ್ದರ ಬಗೆಗೆ ಸಂತಸ ವ್ಯಕ್ತಪಡಿಸುತ್ತ, ಹವ್ಯಕ ಸಂಸ್ಥೆಯು ಕಳೆದ ಹದಿನೈದು ವರ್ಷಗಳಿಂದ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯವರ ಸ್ಮರಣಾರ್ಥ ಪ್ರಶಸ್ತಿಯನ್ನು ಪ್ರದಾನಿಸುತ್ತ ಬಂದಿದೆ ಎಂದು ನುಡಿದರು.

ಸೂರಿ ಪರ್ವ ಕೃತಿಯ ಲೇಖಕರಾದ ಶಶಿಕಲಾ ಹೆಗಡೆಯವರು ಕೃತಿ ರಚನೆಯಲ್ಲಿ ಸಹಕರಿಸಿದವರಿಗೆ ವಂದನೆಗಳನ್ನು ಸಲ್ಲಿಸಿದರು. ಹವ್ಯಕ ಸಂದೇಶದ ಸಂಪಾದಕಿ ಅಮಿತಾ ಭಾಗವತ್ ಅವರು ಕೃತಿಯ ಕುರಿತು ಮಾತನಾಡಿದರು. ಕರ್ನಾಟಕ ಮಲ್ಲ ದಿನಪತ್ರಿಕೆಯ ಸಂಪಾದಕರಾದ ಚಂದ್ರಶೇಖರ್ ಪಾಲೆತ್ತಾಡಿ, ಅಕ್ಷಯ ಮಾಸಿಕದ ಸಂಪಾದಕರಾದ ಈಶ್ವರ್ ಅಲೆವೂರ್, ಮೊಗವೀರ ಮಾಸಿಕದ ಅಶೋಕ್ ಸುವರ್ಣ, ಹವ್ಯಕ ವೆಲ್ಫೇರ್ ಟ್ರಸ್ಟಿನ ಉಪಾಧ್ಯಕ್ಷರಾದ ಸಂಜಯ್ ಭಟ್, ಕಾರ್ಯದರ್ಶಿ ನಾರಾಯಣ್ ಅಕದಾಸ್, ಕೋಶಾಧಿಕಾರಿ ಗೌತಮ್ ಉಪಾಧ್ಯ, ಕನ್ನಡ ವಿಭಾಗದ ಸಂದರ್ಶಕ ಪ್ರಾಧ್ಯಾಪಕರಾದ ಡಾ. ಉಮಾರಾವ್ ಮೊದಲಾದ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಅತಿಥಿ ಗಣ್ಯರು ದೀಪ ಬೆಳಗಿಸುವುದರ ಮೂಲಕ ಆರಂಭಗೊಂಡ ಕಾರ್ಯಕ್ರಮದಲ್ಲಿ ಮೊದಲಿಗೆ ಅಪರ್ಣಾ ಭಟ್ ಅವರು ಭಾವಗೀತೆಯನ್ನು ಹಾಡಿದರು. ಸೂರಿ ನಮನ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿಭಾಗದ ಸಂಶೋಧನಾ ವಿದ್ಯಾರ್ಥಿಗಳಾದ ಶೈಲಜಾ ಹೆಗಡೆಯವರು ಶಂಕರ ಸಂಹಿತೆಯ ಆಯ್ದ ಪದ್ಯಗಳ ಕಾವ್ಯವಾಚನವನ್ನು ಹಾಗೂ ಕಲಾ ಭಾಗವತ್ ಅವರು ತುರಂಗ ಭಾರತದ ಆಯ್ದ ಪದ್ಯಗಳ ಗಮಕ ವಾಚನವನ್ನು ಪ್ರಸ್ತುತಪಡಿಸಿದರು. ಶಶಿಕಲಾ ಹೆಗಡೆಯವರು ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ ನಾಟಕದ ಆಯ್ದ ಸಂಭಾಷಣೆಗಳನ್ನು ಓದಿದರು. ಕನ್ನಡ ವಿಭಾಗದ ಸಹ ಪ್ರಾಧ್ಯಾಪಕಿ ಡಾ. ಪೂರ್ಣಿಮಾ ಶೆಟ್ಟಿಯವರು ಕಾರ್ಯಕ್ರಮವನ್ನು ನಿರೂಪಿಸಿದರು. ತನುಜಾ ಹೆಗಡೆಯವರು ವಂದನಾರ್ಪಣೆ ಸಲ್ಲಿಸಿದರು.

## Obituary



**Shri. Subray Hegde** (84) left for his heavenly abode on Friday, September 23rd, 2022 after a short illness. By the grace of God, he passed away in his sleep. He was a man who exemplified living by his dedication and hard work, He was quintessentially a self-made entrepreneur. Starting his career in Mumbai with only Rs. 10 in his pocket, he worked hard on building his business from the ground up. Over his career, he touched and improved many lives with his generosity and kindness. His free-spirited nature and childlike playfulness made him beloved amongst his family and friends alike. Not once was he without a joke or a riddle, and he uplifted his loved ones through good times and bad with his phenomenal sense of humor. He was a loving husband, father, and grandfather who was intelligent, honest, articulate, and good humored.He is survived by his wife, Madhu Hegde, and his two children, Vinayak Hegde and his wife Meenakshi Hegde as well as Suma Bailkeri and her husband Narendra Bailkeri. He is also survived by four grandchildren, Akshata Bailkeri & Ashish Bailkeri and Amruta Hegde & Varun Hegde.

***We pray for the eternal peace of the departed soul.***

## ವಿಶ್ವದ ಅಗ್ರ ವಿಜ್ಞಾನಿಗಳ ಪಟ್ಟಿ ಅಮರನಾಥ ಹೆಗಡೆಗೆ ಸ್ಥಾನ



ಶಿರಸಿ : ಸತತ ಎರಡನೇ ವರ್ಷ ವಿಶ್ವದ ಅಗ್ರ ಶೇ. 2 ವಿಜ್ಞಾನಿಗಳ ಪಟ್ಟಿಯಲ್ಲಿ ಅಮರನಾಥ ಹೆಗಡೆ ಇವರು ಸ್ಥಾನ ಪಡೆದುಕೊಂಡಿದ್ದಾರೆ. ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯ, ಎಲ್ಸೆವಿಯರ್ ಬಿವಿ (2022) ಪ್ರಕಟಿಸಿದ ವಿಶ್ವದ ಅಗ್ರ ಶೇ. 2 ವಿಜ್ಞಾನಿಗಳ ಪಟ್ಟಿಯಲ್ಲಿ ಶಿರಸಿ ಕೊಟ್ಟಿಗದ್ದೆಯ ಅಮರನಾಥ ಹೆಗಡೆ ಹೆಸರು ಪ್ರಕಟಿತವಾಗಿದೆ. ಪ್ರತಿ ವರ್ಷ ಯುಎಸ್‌ಎ ಸ್ಟ್ಯಾನ್‌ಫೋರ್ಡ್ ವಿಶ್ವ ವಿದ್ಯಾಲಯವು ಸಂಶೋಧನಾ ಪ್ರಕಟಣೆಗಳ ಆಧಾರದ ಮೇಲೆ ಪ್ರಪಂಚದಾದ್ಯಂತದ ಅಗ್ರ ಶೇ. ಎರಡು ಸಂಶೋಧಕರ ಡೇಟಾವನ್ನು ಬಿಡುಗಡೆ ಮಾಡುತ್ತದೆ. ಐಐಟಿ ಪಾಟ್ನಾದ ಹನ್ನೆರಡು ಅಧ್ಯಾಪಕರು ಇಂಜಿನಿಯರಿಂಗ್, ವಿಜ್ಞಾನ ಮತ್ತು ಮಾನವಿಕತೆಯ ವಿವಿಧ ವಿಷಯಗಳಲ್ಲಿ ಈ ಡೇಟಾಬೇಸ್‌ನಲ್ಲಿ ತಮ್ಮ ಸ್ಥಾನಗಳನ್ನು ಪಡೆದುಕೊಂಡಿದ್ದಾರೆ. ಅಮರನಾಥ ಹೆಗಡೆ ಐಐಟಿ ಪಾಟ್ನಾದ ಪ್ರಾಧ್ಯಾಪಕರು. ಇವರು ಶಿರಸಿ ಟಿ. ಎಮ್. ಎಸ್.ನ ಉಪಾಧ್ಯಕ್ಷ, ಹೆಗಡೆಕಟ್ಟಾ ಸೊಸೈಟಿಯ ಅಧ್ಯಕ್ಷ ಎಮ್. ಪಿ. ಹೆಗಡೆ ಅವರ ಪುತ್ರರಾಗಿದ್ದಾರೆ.

*PAGE DONATED BY : **SHRI A. K. BHAT, CHITRIGI & FAMILY***

# Suri Parva - Book Release






















*PAGE DONATED BY :* ***SMT. SHANTA V. HEGDE, CARMICHAEL ROAD***

'Havyaka Sandesha' November 2022

*RNI NO. MAHBIL / 2000 / 746,*
*Postal R.NO. MCN/161/2021-2023*
*WPP License No. MR / Tech / WPP-130 / North / 2021-2023*
*'Licence to post without prepayment'*

*Posted at Mumbai Patrika Channel Stg. Office Mumbai - 400 001*
**Date of Publication : 1st of every month**

**REGISTERED NEWSPAPER**

**Date of Posting :**
**2nd, 3rd of every month**

***If undelivered, please return to :***
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

**To,**

## Achievements



**Kumari Vibha,** D/o. Smt. Jyoti and Dr. Ramachandra Joshi has completed LLB from ILS Law College, Pune in the year 2020 securing first class with distinction (71.4).Currently she is practising as an Advocate in Bombay High Court.



**Kumari Vedashree,** D/o. Smt. Jyoti and Dr. Ramachandra Joshi has completed 12th (ISC) in the year 2020 scoring 93.5%. Currently she is studying B.Tech in K J Somaiya College at Mumbai.

***We congratulate them and wish them a bright future.***

